# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570006

**ದಿನಾಂಕ: 27.07.2023ರಂದು ಪೂರ್ವಾಹ್ನ 11.00** ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ. ಶರಣಪ್ಪ ವಿ. ಹಲಸೆ ರವರ ಅಧ್ಯಕ್ಷತೆಯಲ್ಲಿ ನಡೆದ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಯ 173ನೇ ಸಾಮಾನ್ಯ ಸಭೆಯ ನಡಾವಳಿ.

| ಉಪಸ್ಥಿತರು | |
|---|---|
| **ಪ್ರೊ. ಶರಣಪ್ಪ ವಿ. ಹಲಸೆ**<br>ಮಾನ್ಯ ಕುಲಪತಿಗಳು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು<br>ಕರಾಮುವಿ, ಮೈಸೂರು | **ಪ್ರೊ ಕೆ.ಎಲ್.ಎನ್. ಮೂರ್ತಿ**<br>ಕುಲಸಚಿವರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿಗಳು<br>ಕರಾಮುವಿ, ಮೈಸೂರು |
| **ಪ್ರೊ ಲಕ್ಷ್ಮಿ ಎನ್**<br>ಡೀನ್ (ಶೈಕ್ಷಣಿಕ) ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು,<br>ಕರಾಮುವಿ ಮೈಸೂರು | **ಶ್ರೀಮತಿ. ಉಮಾ.ಕೆ**<br>ಉಪಕಾರ್ಯದರ್ಶಿ<br>ಹಣಕಾಸು ಇಲಾಖೆ (ವೆಚ್ಚಗಳು) ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಬೆಂಗಳೂರು – 560 001<br>**ಆನ್ ಲೈನ್ ಮೂಲಕ ಹಾಜರಿರುತ್ತಾರೆ.** |
| **ಶ್ರೀ ಅಡಗೂರು ಹೆಚ್. ವಿಶ್ವನಾಥ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 1179, 3ನೇ ಮೇನ್, 3ನೇ ಕ್ರಾಸ್<br>ಅರವಿಂದ ನಗರ, ಮೈಸೂರು ಜಿಲ್ಲೆ | **ಶ್ರೀಮತಿ. ಶೀತಲ್**<br>ಉಪಕಾರ್ಯದರ್ಶಿ<br>ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ), ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು<br>ಬೆಂಗಳೂರು – 560 001<br>**ಆನ್ ಲೈನ್ ಮೂಲಕ ಹಾಜರಿರುತ್ತಾರೆ.** |
| **ಶ್ರೀ ಬಿ.ಜಿ. ಪಾಟೀಲ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. ಇ/8/862, ಐರಾವಾಳಿ, ನೆಹರು ಗೂಂಜ್<br>ಕಲಬುತಗಿ-585104 | ............... |

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಗೆ ಕರ್ನಾಟಕ ವಿಧಾನ ಪರಿಷತ್ ಶಾಸಕರಾದ ಶ್ರೀ. ಬಿ.ಜಿ. ಪಾಟೀಲ್ ಇವರನ್ನು ಸದಸ್ಯರನ್ನಾಗಿ ಕರ್ನಾಟಕ ಸರ್ಕಾರವು ನಾಮ ನಿರ್ದೇಶನ ಮಾಡಿ ಆದೇಶಿಸಿದ್ದು, ಸದರಿ ಮಾನ್ಯ ಸದಸ್ಯರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತ ಕೋರಿದರು ಹಾಗೂ ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

ಮಾನ್ಯ ಕುಲಪತಿಗಳು ಮಾತನಾಡಿ, ವಿಷಯಸೂಚಿ ಪ್ರಕಾರ 173ನೇ ಸಾಮಾನ್ಯ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಪ್ರಸ್ತಾಪಿಸಲು ಕುಲಸಚಿವರಿಗೆ ಸೂಚಿಸಿದರು. ನಂತರ, ಕುಲಸಚಿವರು 173ನೇ ವ್ಯವಸ್ಥಾಪನಾ ಮಂಡಳಿಯ ಸಾಮಾನ್ಯ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಪ್ರಸ್ತಾಪಿಸಿದರು.

*******

ಕುಲಪತಿಗಳು ಕುಲಸಚಿವರು

**<u>ವಿಷಯ ಸಂಖ್ಯೆ : 173.01</u>**

ಅ) ದಿನಾಂಕ: 30.06.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 59ನೇ ವಿಶೇಷ ಸಭೆಯ ನಡವಳಿಯನ್ನು ಸ್ಥಿರೀಕರಿಸುವ ಬಗ್ಗೆ.

ಆ) ದಿನಾಂಕ: 30.06.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 59ನೇ ವಿಶೇಷ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ವರದಿ ಬಗ್ಗೆ.

********

ಅ) ದಿನಾಂಕ: 30.06.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 59ನೇ ವಿಶೇಷ ಸಭೆಯ ನಡವಳಿಯನ್ನು ಸ್ಥಿರೀಕರಿಸಲಾಯಿತು.

ಆ) ದಿನಾಂಕ: 30.06.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 59ನೇ ವಿಶೇಷ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ವರದಿಯನ್ನು ಅನುಮೋದಿಸಲಾಯಿತು.

********

**<u>ವಿಷಯ ಸಂಖ್ಯೆ : 173.02</u>**

**ವಿಷಯ:** ವಿಶ್ವವಿದ್ಯಾನಿಲಯದ ಕೇಂದ್ರ ಕಚೇರಿ ಹಾಗೂ ಪ್ರಾದೇಶಿಕ ಕೇಂದ್ರಗಳಿಗೆ ಭದ್ರತಾ ಸಿಬ್ಬಂದಿ ಸೇವೆ ಒದಗಿಸಿದ ಮೆ. ನೊವೆಲ್ ಸೆಕ್ಯೋರಿಟಿ ಸರ್ವೀಸ್ ಬೆಂಗಳೂರು, ಇವರ ಪರಿಷ್ಕೃತ ವೇತನವನ್ನು ಬಿಡುಗಡೆ ಮಾಡುವ ಸಂಬಂಧ ವಿಷಯ ಮಂಡಿಸುವ ಬಗ್ಗೆ.

* * * * *

ವಿಶ್ವವಿದ್ಯಾನಿಲಯಕ್ಕೆ ಹೊಸದಾಗಿ ಭದ್ರತಾ ಸಿಬ್ಬಂದಿ ಸೇವೆ ಪಡೆಯುವ ಸಂಬಂಧ ದಿನಾಂಕ:17.12.2021ರಂದು e-procurement portal ಮೂಲಕ ಟೆಂಡರ್ ಆಹ್ವಾನಿಸಲಾಗಿತ್ತು. ಟೆಂಡರ್ ಪ್ರಕ್ರಿಯೆ ನಡೆಯುವ ಸಮಯದಲ್ಲಿ M/s Surabhi Enterprises, Chithradurga, ಇವರು ವಿಶ್ವವಿದ್ಯಾನಿಲಯದ ವಿರುದ್ಧವಾಗಿ ಮಾನ್ಯ ಉಚ್ಚನ್ಯಾಯಾಲಯ, ಬೆಂಗಳೂರು ಇಲ್ಲಿ ಟೆಂಡರ್‌ಗೆ ಸಂಬಂಧಿಸಿದಂತೆ WP.NO. 204/2022ರ ಪ್ರಕರಣ ದಾಖಲಿಸಿದ್ದುದರಿಂದ, ಮಾನ್ಯ ಉಚ್ಚನ್ಯಾಯಲಯವು ನೀಡಿದ ಮಧ್ಯಂತರ ಆದೇಶದಂತೆ ಸದರಿ ಟೆಂಡರ್ ಪ್ರಕ್ರಿಯೆಯನ್ನು ರದ್ದುಗೊಳಿಸಲಾಗಿತ್ತು. ಮರು ಟೆಂಡರ್ ಪ್ರಕ್ರಿಯೇ ವಿಳಂಬವಾದ ಕಾರಣದಿಂದ ವಿಶ್ವವಿದ್ಯಾನಿಲಯದ ಭದ್ರತೆ ಹಾಗೂ ಚರ/ಸ್ಥಿರ ಆಸ್ತಿಗಳ ಸಂರಕ್ಷಣೆಯ ದೃಷ್ಟಿಯಿಂದ ಮೆ. ನೊವೆಲ್ ಸೆಕ್ಯೋರಿಟಿ ಸರ್ವೀಸ್ ಬೆಂಗಳೂರು ಇವರಿಗೆ ದಿನಾಂಕ:19.04.2022 ರಿಂದ 28.02.2023 ರವರಗೆ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ 168ನೇ ವ್ಯವಸ್ಥಾಪನಾ ಮಂಡಳಿ ಅನುಸಮರ್ಥನೆ ಪಡೆದು ತಾತ್ಕಾಲಿಕವಾಗಿ ಕಾರ್ಯದೇಶವನ್ನು ನೀಡಲಾಗಿತ್ತು.

**ಕುಲಪತಿಗಳು** **ಕುಲಸಚಿವರು**

ಮೆ. ನೊವೆಲ್ ಸೆಕ್ಯೋರಿಟಿ ಸರ್ವೀಸಸ್, ಬೆಂಗಳೂರು ಇವರಿಗೆ ತಾತ್ಕಾಲಿಕವಾಗಿ ಕಾರ್ಯದೇಶ ನೀಡಿದ್ದುದರಿಂದ 2021–22ನೇ ಸಾಲಿನ ಕಾರ್ಮಿಕ ಇಲಾಖೆಯ ನಿಯಮದಂತೆ ವೇತನವನ್ನು ವಿಶ್ವವಿದ್ಯಾನಿಲಯದಿಂದ ಸದರಿಯವರಿಗೆ ಪಾವತಿಸಲಾಗಿತ್ತು. ಹಾಗೆಯೇ ಮಂಡಕಳ್ಳಿ ಶೈಕ್ಷಣಿಕ ಭವನಕ್ಕೆ ಹೆಚ್ಚುವರಿಯಾಗಿ 06 ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಪಡೆಯಲಾಗಿತ್ತು, ಇವರಿಗೆ ಮೇ–2022 ರಿಂದ ಡಿಸೆಂಬರ್ 2022ರವರೆಗೆ ವೇತನವನ್ನು ಪಾವತಿಸಿರುವುದಿಲ್ಲ, 08 ತಿಂಗಳ ಮಾಹೆಯ ಒಟ್ಟು ಮೊತ್ತ ರೂ.13,03,014/– ಗಳಾಗಿದ್ದು, ದಿನಾಂಕ: 27.07.2022 ರಂದು ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯ ಅಧಿಸೂಚನೆಯಂತೆ ದಿನಾಂಕ:01.08.2022ರಿಂದ 28.02.20223 ರ ವರೆಗೆ ಭದ್ರತಾ ಸಿಬ್ಬಂದಿಗಳ ಪರಿಷ್ಕೃತ ವೇತನ ಒಟ್ಟು ಮೊತ್ತ ರೂ. 27,14,572/– + 13,03,014 = 40,17,586/– (ನಲ್ವತ್ತು ಲಕ್ಷದ ಹದಿನೇಳು ಸಾವಿರದ ಐದುನೂರ ಎಂಭತ್ತಾರು ರೂಪಾಯಿಗಳು ಮಾತ್ರ) ಗಳನ್ನು ಪರಿಷ್ಕೃತ ವೇತನ ಮತ್ತು ಭದ್ರತಾ ಸಿಬ್ಬಂದಿ ಸೇವೆ ಒದಗಿಸಿರುವ ಹುಂಡಿಯ ಮೊತ್ತವನ್ನು ಪಾವತಿಸುವಂತೆ ಮನವಿ ಪತ್ರ ಸಲ್ಲಿಸಿರುತ್ತಾರೆ, ಸದರಿ ಸಂಬಂಧ ಮೆ. ನೊವೆಲ್ ಸೆಕ್ಯೋರಿಟಿ ಸರ್ವೀಸಸ್, ಬೆಂಗಳೂರು ಇವರ ಹುಂಡಿ ಪಾವತಿಸುವ ಸಂಬಂಧ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕೆ ವಿಷಯ ಮಂಡಿಸಿದೆ.

********

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯದ ಕೇಂದ್ರ ಕಚೇರಿ ಹಾಗೂ ಪ್ರಾದೇಶಿಕ ಕೇಂದ್ರಗಳಿಗೆ ಭದ್ರತಾ ಸಿಬ್ಬಂದಿ ಸೇವೆ ಒದಗಿಸಿದ ಮೆ. ನೊವೆಲ್ ಸೆಕ್ಯೋರಿಟಿ ಸರ್ವೀಸ್ ಬೆಂಗಳೂರು, ಇವರ ಭದ್ರತಾ ಸಿಬ್ಬಂದಿಗಳ 08 ತಿಂಗಳ ವೇತನದ ಒಟ್ಟು ಮೊತ್ತ ರೂ. 13,03,014 + ಪರಿಷ್ಕೃತ ವೇತನದ ಒಟ್ಟು ಮೊತ್ತ ರೂ. 27,14,572 = 40,17,586/– ಗಳ (ನಲವತ್ತು ಲಕ್ಷದ ಹದಿನೇಳು ಸಾವಿರದ ಐನೂರಎಂಬತ್ತಾರು ರೂಪಾಯಿಗಳು ಮಾತ್ರ) ಹುಂಡಿ ಪಾವತಿಸುವ ಸಂಬಂಧ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.**

********

**ವಿಷಯ ಸಂಖ್ಯೆ:173.03**

**ವಿಷಯ:** Govt. of India ದ ಗೆಜೆಟ್‌ನ 11 April 2023 ರ ಯುಜಿಸಿ ಅಧಿಸೂಚನೆಯ ಅನ್ವಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಒಂಬಡ್ಸ್‌ಪರ್ಸನ್ (Ombudsperson) ರವರನ್ನು ನೇಮಕಾತಿ ಮಾಡುವ ಬಗ್ಗೆ.

********

ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳ ಕುಂದುಕೊರತೆಯನ್ನು ಪರಿಹರಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಕುಂದುಕೊರತೆಗಳ ನಿವಾರಣಾ ಸಮಿತಿಯನ್ನು ಸ್ಥಾಪಿಸಿ, ಆ ಸಮಿತಿಗೆ ಒಬ್ಬರು ಅನುಭವಿ ಒಂಬಡ್ಸ್‌ಪರ್ಸನ್(Ombudsperson) ರವರನ್ನು ನೇಮಕಾತಿ ಮಾಡುವ ಕುರಿತು Govt. of India ದ ಗೆಜೆಟ್‌ನ 11 April 2023 ರ ಯುಜಿಸಿ ತನ್ನ ಅಧಿಸೂಚನೆಯಲ್ಲಿ ತಿಳಿಸಿರುತ್ತದೆ.

ಕುಲಪತಿಗಳು | ಕುಲಸಚಿವರು

ಅದರಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಕೂಡ ಯುಜಿಸಿಯ ಅಧಿಸೂಚನೆಯಂತೆ ವಿದ್ಯಾರ್ಥಿಗಳ ಕುಂದುಕೊರತೆಗಳ ನಿವಾರಣಾ ಸಮಿತಿಯನ್ನು ಸ್ಥಾಪಿಸಿ, Student Grievance Redressal Committee ಯಲ್ಲಿ ಇತ್ಯರ್ಥವಾಗದ/ಸದರಿ ಸಮಿತಿಯ ತೀರ್ಮಾನದಿಂದ ತೃಪ್ತನಾಗದ ವಿದ್ಯಾರ್ಥಿಯ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಒಬ್ಬ ಅನುಭವಿ ಒಂಬಡ್ಸ್‌ಪರ್ಸನ್(Ombudsperson) ರವರನ್ನು ನೇಮಕ ಮಾಡಬೇಕಾಗಿರುತ್ತದೆ. Ombudsperson ರವರ ನೇಮಕಾತಿಗೆ UGC ಯು ವಿವರವಾದ ನಿಬಂಧನೆಗಳು ಮತ್ತು ಮಾರ್ಗಸೂಚಿಗಳನ್ನು ಪ್ರಕಟಿಸಿದ್ದು ಅವುಗಳು ಈ ಕೆಳಕಂಡಂತಿವೆ.

**Appointment, Tenure, Removal and Conditions of Services of Ombudsperson:**

i. Each University shall appoint Ombudsperson for redressal of grievances of students of the university and colleges/institutions affiliated with the university under these regulations.

ii. There shall be one or more part-time functionaries designated as Ombudspersons to hear, and decide on, appeals preferred against the decisions of the SGRCs.

iii. The Ombudsperson shall be a retired Vice-Chancellor or a retired Professor (who has worked as Dean/HOD) and has 10 years' experience as a Professor at State/Central Universities/Institutions of National Importance/Deemed to be Universities or a former District Judge.

iv. The Ombudsperson shall not, at the time of appointment, during one year before appointment, or in the course of his/her tenure as Ombudsperson, be in conflict of interest with the Institution where his/her personal relationship, professional affiliations or financial interest may compromise or reasonably appear to compromise, the independence of judgment towards the Institution.

v. The Ombudsperson shall be appointed for a period of three years or until he/she attains the age of 70 years, whichever is earlier, from the date of assuming office, and shall be eligible for reappointment for another one term.

vi. For conducting the hearings, the Ombudsperson shall be paid a sitting fee, per diem, in accordance with the norms fixed by the respective university and shall, in addition, be eligible for reimbursement of the expenditure incurred on conveyance.

vii. The University may remove the Ombudsperson from office, on charges of proven misconduct or misbehaviour.

viii. No order of removal of Ombudsperson shall be made except after an inquiry made in this regard by a person, not below the rank of a retired judge of the High Court in which a reasonable opportunity of being heard is given to the Ombudsperson.

ಕುಲಪತಿಗಳು ಕುಲಸಚಿವರು

**ಒಂಬಡ್ಸ್‌ಪರ್ಸನ್(Ombudsperson) ರವರು ನಿರ್ವಹಿಸಬೇಕಾದ ಕರ್ತವ್ಯಗಳು**

i. The Ombudsperson shall hear appeals from an aggrieved student, only after the student has availed all other remedies provided under these regulations.

ii. While issues of malpractices in the conduct of examination or in the process of evaluation may be referred to the Ombudsperson, no appeal or application for revaluation or re-totaling of answer sheets from an examination, shall be entertained by the Ombudsperson unless specific irregularity materially affecting the outcome or specific instance of discrimination is indicated.

iii. The Ombudsperson may avail assistance of any person, as amicus curiae, for hearing complaints of alleged discrimination.

iv. The Ombudsperson shall make all efforts to resolve the grievances within a period of 30 days of receiving the appeal from the aggrieved student(s).

ಒಂಬಡ್ಸ್‌ಪರ್ಸನ್ ನೇಮಕಾತಿಗೆ ಸಂಬಂಧಿಸಿದಂತೆ ಯುಜಿಸಿ ಹೊರಡಿಸಿರುವ ನಿಯಾಮಾವಳಿಗಳನ್ನು ಕಡ್ಡಾಯವಾಗಿ ವಿಶ್ವವಿದ್ಯಾನಿಲಯವು ಅಳವಡಿಸಿಕೊಳ್ಳಬೇಕಾಗಿರುತ್ತದೆ. ಆದ್ದರಿಂದ ಯುಜಿಸಿಯ Redressal of Grievances of Students Regulations, 2023 ಅಳವಡಿಸಿಕೊಳ್ಳಲು, ಹಾಗೂ Prof. Mallikarjunaswamy, Department of Computer Science & Engineering, Vignan's Foundation for Science, Technology & Research (Deemed to be University) Vadlamudi-522213, Guntur District, AndraPradesh ಅವರನ್ನು Ombudsperson ಆಗಿ ನೇಮಕ ಮಾಡಿಕೊಳ್ಳುವ ಸಂಬಂಧ ದಿನಾಂಕ: 27.07.2023 ರಂದು ನಡೆಯಲಿರುವ ವ್ಯವಸ್ಥಾಪನಾ ಮಂಡಳಿಯಲ್ಲಿ ಚರ್ಚಿಸಿ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

********

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು,** Govt. of Indiaದ ಗೆಜೆಟ್‌ನ 11 April 2023 ರ ಯುಜಿಸಿ ಅಧಿಸೂಚನೆಯ ಅನ್ವಯ ಒಂಬಡ್ಸ್‌ಪರ್ಸನ್ ನೇಮಕಾತಿಗೆ ಸಂಬಂಧಿಸಿದಂತೆ ಯುಜಿಸಿ ಹೊರಡಿಸಿರುವ ನಿಯಮಾವಳಿಗಳನ್ನು ಕಡ್ಡಾಯವಾಗಿ ವಿಶ್ವವಿದ್ಯಾನಿಲಯವು ಅಳವಡಿಸಿಕೊಳ್ಳಬೇಕಾಗಿರುವುದರಿಂದ ಯುಜಿಸಿಯ Redressal of Grievances of Students Regulations, 2023 ಅಳವಡಿಸಿಕೊಳ್ಳಲು, Prof. Mallikarjunaswamy, Department of Computer Science & Engineering, Vignan's Foundation for Science, Technology & Research (Deemed to be University) Vadlamudi-522213, Guntur District, Andra Pradesh ರವರನ್ನು Ombudsperson ಆಗಿ ನೇಮಕ ಮಾಡಿಕೊಳ್ಳಲು **ಸಭೆಯು ಸರ್ವಾನುಮತದಿಂದ ಒಪ್ಪಿತು.**

********

ಕುಲಪತಿಗಳು ಕುಲಸಚಿವರು

**ವಿಷಯ ಸಂಖ್ಯೆ:173.04**

**ವಿಷಯ:** ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯನ್ನು ಅನುಮೋದಿಸುವ ಕುರಿತು.

*****

ದಿನಾಂಕ: 18.07.2023 ರಂದು ನಡೆದ 28ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯನ್ನು ದಿನಾಂಕ: 27.07.2023 ರಂದು ನಡೆಯಲಿರುವ ವ್ಯವಸ್ಥಾಪನಾ ಮಂಡಳಿಯ 173ನೇ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

*****

<u>ತೀರ್ಮಾನ:</u>

**ದಿನಾಂಕ: 18.07.2023 ರಂದು ನಡೆದ 28ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯನ್ನು ದಿನಾಂಕ: 27.07.2023 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 173ನೇ ಸಾಮಾನ್ಯ ಸಭೆಯಲ್ಲಿ ಅನುಮೋದಿಸಿತು.**

*****

**ವಿಷಯ ಸಂಖ್ಯೆ: 173.05**

**ವಿಷಯ:–** ಶ್ರೀ.ರಮೇಶ್.ಜೆ ಉಪಕುಲಸಚಿವರು (ಪರೀಕ್ಷಾಂಗ) ವಿಭಾಗ, ಇವರ ವೈದ್ಯಕೀಯ ವೆಚ್ಚದ ಹುಂಡಿಯ ಮರುಭರಿಕೆ ಕುರಿತು.

ಶ್ರೀ.ರಮೇಶ್.ಜೆ ಉಪಕುಲಸಚಿವರು (ಪರೀಕ್ಷಾಂಗ) ವಿಭಾಗ, ಇವರ ರಸ್ತೆ ಅಪಘಾತದಿಂದ, ಅರೆತಜ್ಞಾಪಸ್ತೆಯಲ್ಲಿ ಬಿ.ಜಿ.ಎಸ್ ಅಪೋಲೋ ಆಸ್ಪತ್ರೆ, ಮೈಸೂರು ಇಲ್ಲಿ ಒಳರೋಗಿಯಾಗಿ ದಾಖಲಾಗಿದ್ದು, ವೈದ್ಯಕೀಯ ಚಿಕಿತ್ಸೆ ವೆಚ್ಚ ಹುಂಡಿಯ ಮೊತ್ತ ರೂ.3,91,413/– ಗಳನ್ನು ಮರುಪಾವತಿ ಮಾಡುವ ಸಂಬಂಧ ಸದರಿಯವರ ಪತ್ನಿಯವರು ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ.

ಸದರಿ ಹುಂಡಿಗಳನ್ನು KMAR ನಿಯಮ 1963 ಪ್ರಕಾರ CHGS ಬೆಂಗಳೂರು ದರಗಳ ಅನ್ವಯ ಪರಿಶೀಲಿಸಿದ ನಂತರ ಪಾವತಿಸಬೇಕಾಗಿರುವ ಒಟ್ಟು ಮೊತ್ತ ರೂ.**3,00,545/–** ಗಳಾಗಿರುತ್ತದೆ.

ವಿವಿನಿಲಯದ ಪರಿನಿಯಮ 23(3)ರಲ್ಲಿ, ವೈದ್ಯಕೀಯ ಮರುಭರಿಕೆ ವೆಚ್ಚವು ಪ್ರತಿ ನೌಕರನಿಗೆ ಒಂದು ಆರ್ಥಿಕ ವರ್ಷದಲ್ಲಿ ರೂ.1 ಲಕ್ಷ ಮೀರಬಾರದು ಎಂದಿರುತ್ತದೆ. ಹಾಗೆಯೇ, 23(5) ರಲ್ಲಿ ಒಂದು ಆರ್ಥಿಕ ವರ್ಷದಲ್ಲಿ ವೈದ್ಯಕೀಯ ವೆಚ್ಚವು 1 ಲಕ್ಷ ಮೀರಿದ ಸಚಿದರ್ಭದಲ್ಲಿ ಮಾನ್ಯ ಕುಲಪತಿಗಳ ತೀರ್ಮಾನವನ್ನಾಧರಿಸಿ ಪ್ರಸ್ತಾವನೆಯನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಬಹುದು ಎಂದಿರುತ್ತದೆ.

**ಕುಲಪತಿಗಳು** **ಕುಲಸಚಿವರು**

ಈ ಸಂಬಂಧ ಸದರಿವರಿಗೆ ಮೇಲ್ಕಂಡ ವೈದ್ಯಕೀಯ ವೆಚ್ಚದ ಮರುಭರಿಕೆ ಹುಂಡಿಯ ಮೊತ್ತ ರೂ.**3,00,545/-** ಗಳನ್ನು ಪಾವತಿಸುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

*****

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಶ್ರೀ.ರಮೇಶ್.ಜೆ ಉಪಕುಲಸಚಿವರು (ಪರೀಕ್ಷಾಂಗ) ವಿಭಾಗ, ಇವರ ವೈದ್ಯಕೀಯ ವೆಚ್ಚದ ಮರುಭರಿಕೆ ಹುಂಡಿಯ ಮೊತ್ತ ರೂ.3,00,545/- ಗಳನ್ನು KMAR ನಿಯಮ 1963 ಪ್ರಕಾರ CHGS, ಬೆಂಗಳೂರು ದರಗಳ ಅನ್ವಯ ಪಾವತಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.**

*****

**ವಿಷಯ ಸಂಖ್ಯೆ: 173.06**

**ವಿಷಯ:** ವಿಶ್ವವಿದ್ಯಾನಿಲಯದಲ್ಲಿ ಅನುಚ್ಛೇದ 371(ಜೆ) ರನ್ವಯ ಹೈದ್ರಾಬಾದ್ - ಕರ್ನಾಟಕ ಪ್ರದೇಶದ ಸ್ಥಳೀಯವ್ಯಕ್ತಿಗಳಿಗೆ ಅನ್ವಯವಾಗುವಂತೆ ಮೀಸಲಿರಿಸಿರುವ ಬೋಧಕೇತರ ಹುದ್ದೆಗಳ ನೇರ ನೇಮಕಾತಿ ಮಾಡುವ ಕುರಿತು.

* * * * *

ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವನ್ನು ಹೊರತುಪಡಿಸಿ ಯಾವುದೇ ವಿಶ್ವವಿದ್ಯಾನಿಲಯವು ದೂರ ಶಿಕ್ಷಣ ವಿಧಾನದಲ್ಲಿ ಯಾವುದೇ ಕಾರ್ಯಕ್ರಮ ನೀಡತಕ್ಕದ್ದಲ್ಲ ಎಂದು ದಿನಾಂಕ:30.12.2020ರಂದು ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣದಿಂದ ವಂಚಿತರಾದವರಿಗೆ, ಹಿಂದುಳಿದವರಿಗೆ, ದೀನದಲಿತರಿಗೆ, ಬಡವರಿಗೆ ಹಾಗೂ ಗುಡ್ಡಗಾಡು ಅರಣ್ಯದಂಚಿನ ಬಡಮಕ್ಕಳಿಗೆ ದೂರಶಿಕ್ಷಣದ ಮೂಲಕ ಉನ್ನತ ಶಿಕ್ಷಣವನ್ನು ಕಡಿಮೆ ವೆಚ್ಚದಲ್ಲಿ ನೀಡುವ ಸದುದ್ದೇಶದಿಂದ ರಾಜ್ಯದ 23 ಜಿಲ್ಲಾ ಕೇಂದ್ರಗಳಲ್ಲಿ ಪ್ರಾದೇಶಿಕ ಕೇಂದ್ರಗಳನ್ನು ತೆರೆದು ಕಾರ್ಯನಿರ್ವಹಿಸುತ್ತಿದ್ದು, ಉಳಿದ 11 ಜಿಲ್ಲಾ ಕೇಂದ್ರಗಳಲ್ಲೂ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲು ಕ್ರಮವಹಿಸಲಾಗಿದ್ದು, ವಿಶ್ವವಿದ್ಯಾನಿಲಯಕ್ಕೆ **ನ್ಯಾಕ್ ಎ+ ದರ್ಜೆ** ದೊರಕಿದ್ದು ಹಾಗೂ 2023ನೇ ಸಾಲಿನಿಂದ 2028ರ ವರೆಗೆ ಯು.ಜಿ.ಸಿ.ಯಿಂದ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಮಾನ್ಯತೆ ದೊರೆತ್ತಿದ್ದು,

**ಕುಲಪತಿಗಳು** **ಕುಲಸಚಿವರು**

ಸ್ತುತ ಎಲ್ಲಾ ಪದವಿ ವಿಷಯಗಳಿಗೆ ಸೆಮಿಸ್ಟರ್ ಸ್ಕೀಂನಡಿ ಪ್ರವೇಶಾತಿ ಪ್ರಾರಂಭವಾಗಿದ್ದು, ವಿದ್ಯಾರ್ಥಿಗಳ ಸಂಖ್ಯೆಯು ಗಣನೀಯವಾಗಿ ಏರಿಕೆಯಾಗುತ್ತಿರುವ ಹಾಗೂ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸುವ ಸಂಬಂಧ ಮಾನ್ಯತೆ ಪಡೆಯಲು UGC-ODL Regulation 2020ರನ್ವಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಬೇಕಾಗಿರುತ್ತದೆ, ಈ ಷರತ್ತಿಗೊಳಪಟ್ಟು UGC-DEB ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಲು ಅನುಮತಿ ನೀಡಲಾಗಿರುತ್ತದೆ ಹಾಗೂ Online ಮೂಲಕ ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳನ್ನು ಪ್ರಾರಂಭಿಸಲು UGC-DEBಗೆ ಅರ್ಜಿ ಸಲ್ಲಿಸಲಾಗಿದ್ದು, ವಿಶ್ವವಿದ್ಯಾನಿಲಯದ ಶೈಕ್ಷಣಿಕ ಕಾರ್ಯಕ್ರಮಗಳನ್ನು ದೇಶದಾದ್ಯಂತ ವಿಸ್ತರಿಸಿ, ಉನ್ನತ ಶಿಕ್ಷಣದಿಂದ ವಂಚಿತರಾದವರಿಗೆ ಶಿಕ್ಷಣ ನೀಡುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದ್ದು, Online Course ಗಳಿಗೆ ಪ್ರತ್ಯೇಕವಾಗಿ ಬೋಧಕೇತರ ಸಿಬ್ಬಂದಿ ಹೊಂದುವುದು UGC-ODL Regulation 2020ರನ್ವಯ ಕಡ್ಡಾಯವಾಗಿರುತ್ತದೆ. ವಿದ್ಯಾರ್ಥಿಗಳಿಗೆ ಅಗತ್ಯ ಶೈಕ್ಷಣಿಕ ಸೌಲಭ್ಯಗಳನ್ನು ತ್ವರಿತವಾಗಿ ನೀಡುವ ನಿಟ್ಟಿನಲ್ಲಿ ಈಗಾಗಲೇ ಹೈದ್ರಾಬಾದ್ - ಕರ್ನಾಟಕ ಪ್ರದೇಶದಲ್ಲಿ ಪ್ರಾದೇಶಿಕ ಕೇಂದ್ರಗಳನ್ನು ತೆರೆಯಲಾಗಿದ್ದು, ಅಗತ್ಯ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಬೇಕಿರುತ್ತದೆ.

ಈ ಹಿನ್ನಲೆಯಲ್ಲಿ ಈಗಾಗಲೇ ವಿಶ್ವವಿದ್ಯಾನಿಲಯದಲ್ಲಿ ವಿವಿಧ ವರ್ಗದ ಒಟ್ಟಾರೆ 575 ಹುದ್ದೆಗಳು ಸರ್ಕಾರದಿಂದ ಸೃಜನೆಯಾಗಿದ್ದು, ಸದರಿ ಹುದ್ದೆಗಳಲ್ಲಿ ನಿಯಮಾನುಸಾರ ಅನುಚ್ಛೇದ 371(ಜೆ) ರನ್ವಯ ಹೈದ್ರಾಬಾದ್ - ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಅನ್ವಯವಾಗುವಂತೆ ಸ್ಥಳೀಯ ವೃಂದ ರಚಿಸಿ ಅಧಿಸೂಚಿಸಲಾಗಿರುತ್ತದೆ(ಅಧಿಸೂಚನೆ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/883/2013-14/ಸಿ.ನಂ:1308,ದಿನಾಂಕ:27.01.2017).

ಇದರನ್ವಯ ನೇರ ನೇಮಕಾತಿ ಹುದ್ದೆಗಳ ವಿವರ ಈ ಕೆಳಕಂಡಂತೆ ಇರುತ್ತವೆ.

| ಗ್ರೂಪ್ 'ಸಿ' ಹುದ್ದೆಗಳು | | | ಗ್ರೂಪ್ 'ಡಿ' ಹುದ್ದೆಗಳು | | |
|---|---|---|---|---|---|
| ಕ್ರ.ಸಂ | ಹುದ್ದೆಗಳ ಹೆಸರು | ನೇರ ನೇಮಕಾತಿ ಹುದ್ದೆಗಳ ಸಂಖ್ಯೆ | ಕ್ರ.ಸಂ | ಹುದ್ದೆಗಳ ಹೆಸರು | ನೇರ ನೇಮಕಾತಿ ಹುದ್ದೆಗಳ ಸಂಖ್ಯೆ |
| 1 | ಪ್ರಥಮ ದರ್ಜೆ ಗುಮಾಸ್ತ | 04 | 1 | ಪರಿಚಾರಕ | 02 |
| 2 | ಸಹಾಯಕ ನಿರ್ದೇಶಕ | 01 | 2 | ಸೇವಕ | 05 |
| 3 | ಟೈಪಿಸ್ಟ್ | 01 | 3 | ಸ್ವೀಪರ್ | 02 |
| 4 | ವಾಹನ ಚಾಲಕ | 01 | 4 | ಹೆಲ್ಪರ್ | 01 |
| 5 | ದ್ವಿತೀಯ ದರ್ಜೆ ಗುಮಾಸ್ತ | 08 | 5 | ಗ್ಯಾಂಗ್ ಮೆನ್ | 01 |
| 6 | ಡೇಟಾ ಎಂಟ್ರಿ ಆಪರೇಟರ್ | 05 | | | |
| 7 | ಎಲೆಕ್ಟ್ರೀಷಿಯನ್ | 01 | | | |
| 8 | ಪ್ಲಂಬರ್ | 01 | | | |
| 9 | ಕಂಪ್ಯೂಟರ್ ಪ್ರೋಗ್ರಾಮರ್ | 01 | | | |
| 10 | ಫಾರ್ಮಸಿಸ್ಟ್ | 01 | | | |

ಕುಲಪತಿಗಳು

ಕುಲಸಚಿವರು

ಮೇಲ್ಕಂಡ 35 ವಿವಿಧ ವರ್ಗದ ಹುದ್ದೆಗಳನ್ನು ಅನುಚ್ಛೇದ 371(ಜೆ) ರನ್ವಯ ಹೈದ್ರಾಬಾದ್ – ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಅನ್ವಯವಾಗುವಂತೆ ನೇರ ನೇಮಕಾತಿಯಡಿಯಲ್ಲಿ ಸರ್ಕಾರದ ನಿಯಾಮವಳಿಗನುಗುಣವಾಗಿ ನೇಮಕಾತಿ ಮಾಡುವ ಸಂಬಂಧ ಅಂಗೀಕಾರಕ್ಕಾಗಿ ನೇಮಕಾತಿ ಪ್ರಾಧಿಕಾರವಾದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಚರ್ಚಿಸಿ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*******

ಕುಲಸಚಿವರು ಮಾತನಾಡುತ್ತಾ, ವಿಶ್ವವಿದ್ಯಾನಿಲಯದಲ್ಲಿ 35 ವಿವಿಧ ವರ್ಗದ ಹುದ್ದೆಗಳನ್ನು ಅನುಚ್ಛೇದ 371(ಜೆ) ರನ್ವಯ ಹೈದ್ರಾಬಾದ್ – ಕರ್ನಾಟಕ ಪ್ರದೇಶದ ಸ್ಥಳೀಯವ್ಯಕ್ತಿಗಳಿಗೆ ಅನ್ವಯವಾಗುವಂತೆ ಮೀಸಲಿರಿಸಿರುವ ಬೋಧಕೇತರ ಹುದ್ದೆಗಳ ನೇರ ನೇಮಕಾತಿಯಡಿಯಲ್ಲಿ ಸರ್ಕಾರದ ನಿಯಮಾವಳಿಗನುಗುಣವಾಗಿ ನೇಮಕ ಮಾಡುವ ಸಂಬಂಧ ಸಭೆಗೆ ಕೂಲಂಕಷವಾಗಿ ವಿವರಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಅನುಚ್ಛೇದ 371(ಜೆ) ರನ್ವಯ ನೇರ ನೇಮಕಾತಿಗೆ ಸಂಬಂಧಿಸಿದಂತೆ ಸರ್ಕಾರದ ಸುತ್ತೋಲೆ ಸಂಖ್ಯೆ:ಆಇ 02 ಬಿಇಎಂ 2021 ದಿನಾಂಕ: 24.11.2021 ರನ್ವಯ 371(ಜೆ) ರ ಅಡಿಯಲ್ಲಿ ಬೋಧಕೇತರ ಹುದ್ದೆಗಳ ನೇರ ನೇಮಕಾತಿ ಭರ್ತಿ ಮಾಡುವ ಕುರಿತಂತೆ ಉನ್ನತ ಶಿಕ್ಷಣ ಇಲಾಖೆಯ ಅನುಮತಿ ಪಡೆದು ನಂತರ ಕ್ರಮವಹಿಸುವಂತೆ ಹಾಗೂ ಶೀಘ್ರಲಿಪಿಗಾರರು, ಬೆರಳಚ್ಚುಗಾರರು, ವಾಹನ ಚಾಲಕರು ಮತ್ತು ಗ್ರೂಪ್ 'ಡಿ' ವೃಂದಗಳ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳುವಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ 371(ಜೆ) ರ ಅಡಿಯಲ್ಲಿ ಬೋಧಕೇತರ ಹುದ್ದೆಗಳ ನೇರ ನೇಮಕಾತಿ ಭರ್ತಿ ಮಾಡುವ ಕುರಿತಂತೆ ಉನ್ನತ ಶಿಕ್ಷಣ ಇಲಾಖೆಗೆ ಪತ್ರವನ್ನು ಬರೆಯುವುದಾಗಿ ತಿಳಿಸಿದರು.

*******

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, 35 ವಿವಿಧ ವರ್ಗದ ಹುದ್ದೆಗಳನ್ನು ಅನುಚ್ಛೇದ 371(ಜೆ) ರನ್ವಯ ಹೈದ್ರಾಬಾದ್ – ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಅನ್ವಯವಾಗುವಂತೆ ಮೀಸಲಿರಿಸಿರುವ ಬೋಧಕೇತರ ಹುದ್ದೆಗಳ ನೇರ ನೇಮಕಾತಿಯಡಿಯಲ್ಲಿ ಸರ್ಕಾರದ ನಿಯಮಾವಳಿಗನುಗುಣವಾಗಿ ನೇಮಕಾತಿ ಮಾಡುವ ಸಂಬಂಧ ಉನ್ನತ ಶಿಕ್ಷಣ ಇಲಾಖೆಗೆ ಪತ್ರವನ್ನು ಬರೆದು ಅನುಮೋದನೆ ಪಡೆದ ನಂತರ ಮುಂದಿನ ಕ್ರಮವಹಿಸುವಂತೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.**

*******

ಕುಲಪತಿಗಳು ಕುಲಸಚಿವರು

**ವಿಷಯ ಸಂಖ್ಯೆ: 173.07**

**ವಿಷಯ:** ವಿವಿ ನಿಲಯಕ್ಕೆ ಅವಶ್ಯವಿರುವ Studio Equipment's ಹಾಗೂ Video Conference Unit ಗಳನ್ನು ಖರೀದಿಸುವ ಬಗೆಗೆ.

******

a) ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ದೃಶ್ಯ ಸ್ಟುಡಿಯೋ ವಿಭಾಗಕ್ಕೆ ಅವಶ್ಯವಿರುವ Studio Equipments ಗಳನ್ನು, ಖರೀದಿಸುವ ಸಂಬಂಧ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ M/s KEONICS ಸಂಸ್ಥೆ, ಬೆಂಗಳೂರು ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕೋರಲಾಗಿ, ಅದರಂತೆ M/s KEONICS ಬೆಂಗಳೂರು ರವರು ದಿನಾಂಕ: 18.07.2023 ರಂದು ವಿವಿಗೆ ಈ ಕೆಳಕಂಡಂತೆ ದರಪಟ್ಟಿ ಸಲ್ಲಿಸಿರುತ್ತಾರೆ.

| Sl.No. | Description | Quantity | Amount in Rupees (Inc all Tax) |
|---|---|---|---|
| 1 | Studio Equipments | 01 | 90,34,793 |

b) ವಿವಿಯಲ್ಲಿ ಹಾಗೂ ಸರ್ಕಾರದೊಂದಿಗೆ ನಡೆಯುವ ವಿವಿಧ Online ಸಭೆಗಳಿಗೆ ಹಾಜರಾಗಲು ಅವಶ್ಯವಿದ್ದ Video Conference System ಅನ್ನು ಖರೀದಿಸಿ ಮಾನ್ಯ ಕುಲಪತಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಅಳವಡಿಸಲಾಗಿದ್ದು ಸದರಿ ಯಂತ್ರವು ದುರಸ್ತಿಯಲ್ಲಿದ್ದು Outdated ಆಗಿದ್ದು Service ಮಾಡಲು ಆಗದ ಕಾರಣ ನೂತನ ವಿಡಿಯೋ ಕಾನ್ಫರೆನ್ಸ್ System ಖರೀದಿಸಿ ಅಳವಡಿಸುವ ಸಂಬಂಧ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ M/s KEONICS ಸಂಸ್ಥೆ, ಬೆಂಗಳೂರು ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕೋರಲಾಗಿ, ಅದರಂತೆ M/s KEONICS ಬೆಂಗಳೂರು ರವರು ದಿನಾಂಕ: 18.07.2023 ರಂದು ವಿವಿಗೆ ಈ ಕೆಳಕಂಡಂತೆ ದರಪಟ್ಟಿ ಸಲ್ಲಿಸಿರುತ್ತಾರೆ.

| Sl.No. | Description | Quantity | Amount in Rupees (Inc all Tax) |
|---|---|---|---|
| 1 | Video Conference Unit | 01 | 9,42,289 |

ಮೇಲಿನ (a) ಹಾಗೂ (b) ಸಂಬಂಧ ವಿವಿಗೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಲು M/s KEONICS ಸಂಸ್ಥೆ, ಬೆಂಗಳೂರು ರವರು ಒಟ್ಟು ಮೊತ್ತ ರೂ. **99,77,082/–**(ತೊಂಭತ್ತೊಂಬತ್ತು ಲಕ್ಷದ ಎಪ್ಪತ್ತೇಳು ಸಾವಿರದ ಎಂಬತ್ತೆರಡು ರೂಪಾಯಿಗಳು ಮಾತ್ರ, ಎಲ್ಲಾ ತೆರಿಗೆಗಳು ಸೇರಿ) ಗಳ ಪ್ರಸ್ತಾವನೆ ಸಲ್ಲಿಸಿದ್ದು ಈ ಸಂಬಂಧ ಉಪಕರಣಗಳನ್ನು ಖರೀದಿಸುವ ಬಗ್ಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

**ಕುಲಪತಿಗಳು** **ಕುಲಸಚಿವರು**

ಕುಲಸಚಿವರು ಮಾತನಾಡಿ, ಸದರಿ ವಿಷಯದ ಬಗ್ಗೆ ವಿವಿಯಲ್ಲಿ Video Conference System ಯಂತ್ರವು ದುರಸ್ತಿಯಲ್ಲಿದ್ದು Outdated ಆಗಿದ್ದು Service ಮಾಡಲು ಆಗದ ಕಾರಣ ನೂತನ ವಿಡಿಯೋ ಕಾನ್ಫರೆನ್ಸ್ System ಖರೀದಿಸಿ ಅಳವಡಿಸಿಕೊಳ್ಳುವ ಸಂಬಂಧ M/s KEONICS ಸಂಸ್ಥೆ, ಬೆಂಗಳೂರು ರವರು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿಯವರಿಂದ ಉಪಕರಣಗಳನ್ನು ಖರೀದಿಸುವ ಬಗ್ಗೆ **ಕೂಲಂಕಷವಾಗಿ ಸಭೆಗೆ ವಿವರಿಸಿದರು.**

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, M/s KEONICS ಸಂಸ್ಥೆ, ಬೆಂಗಳೂರು ಇವರು ಸರ್ಕಾರಿ ಸ್ವಾಮ್ಯದ 4(ಜಿ) ವಿನಾಯಿತಿ ಹೊಂದಿರುವ ಸಂಸ್ಥೆಯಾಗಿದ್ದಲ್ಲಿ ನಿಯಮಾನುಸಾರ ಕ್ರಮವಹಿಸಬಹುದೆಂದು ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದರು.

******

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, M/s KEONICS ಸಂಸ್ಥೆ, ಬೆಂಗಳೂರು ಇವರು ಸರ್ಕಾರಿ ಸ್ವಾಮ್ಯದ 4(ಜಿ) ವಿನಾಯಿತಿ ಹೊಂದಿದ್ದಲ್ಲಿ ಸದರಿ ಸಂಸ್ಥೆಯವರಿಂದ ನಿಯಮಾನುಸಾರವಾಗಿ Studio Equipments ಗಳನ್ನು ಹಾಗೂ Video Conference Unit ಗಳನ್ನು ಖರೀದಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.**

******

## ವಿಷಯ ಸಂಖ್ಯೆ: 173.08

**ವಿಷಯ:** ವಿವಿ ನಿಲಯಕ್ಕೆ ಅವಶ್ಯವಿರುವ Photocopier Machine ಹಾಗೂ MFP (Multifunctional Device) Printers ಗಳನ್ನು ಖರೀದಿಸುವ ಬಗೆಗೆ.

******

ಪ್ರಸ್ತುತ ವಿವಿ ನಿಲಯ ಹಾಗೂ ಪ್ರಾದೇಶಿಕ ಕೇಂದ್ರಗಳಿಗೆ ಅವಶ್ಯವಿರುವ Photocopier Machines ಹಾಗೂ MFP (Multifunctional Device) Printers ಗಳನ್ನು ಖರೀದಿಸುವ ಸಂಬಂಧ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ M/s KEONICS ಸಂಸ್ಥೆ, ಬೆಂಗಳೂರು ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕೋರಲಾಗಿ, ಅದರಂತೆ M/s KEONICS ಬೆಂಗಳೂರು ರವರು ದಿನಾಂಕ:14.07.2023 ರಂದು ವಿವಿಗೆ ಈ ಕೆಳಕಂಡಂತೆ ದರಪಟ್ಟಿ ಸಲ್ಲಿಸಿರುತ್ತಾರೆ.

| Sl.No. | Description | Quantity | Amount in Rupees |
|---|---|---|---|
| 1 | Photocopier Machine | 15 | 39,82,500 |
| 2 | Canon Multifunctional Colour Copier Machine | 03 | 15,25,740 |
| 3 | Canon Multifunctional Device-MF244dw/dn | 15 | 7,87,650 |
| | Total (Inclusive of All Tax) | | 62,95,890/- |

ಕುಲಪತಿಗಳು

ಕುಲಸಚಿವರು

ಮೇಲಿನಂತೆ ವಿವಿ ನಿಲಯದ ವಿವಿಧ ವಿಭಾಗಗಳಿಗೆ ಹಾಗೂ ನೂತನವಾಗಿ ಪ್ರಾರಂಭಿಸಿರುವ ಪ್ರಾದೇಶಿಕ ಕೇಂದ್ರಗಳಿಗೆ ಸದರಿ ಉಪಕರಣಗಳನ್ನು ಖರೀದಿಸುವ ಬಗ್ಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*******

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ವಿವಿ ನಿಲಯದ ವಿವಿಧ ವಿಭಾಗಗಳಿಗೆ ಹಾಗೂ ನೂತನವಾಗಿ ಪ್ರಾರಂಭಿಸಿರುವ ಪ್ರಾದೇಶಿಕ ಕೇಂದ್ರಗಳಿಗೆ Photocopier Machines ಹಾಗೂ MFP (Multifunctional Device) Printers ಗಳನ್ನು M/s KEONICS ಬೆಂಗಳೂರು, ಸಂಸ್ಥೆಯವರಿಂದ ನಿಯಮಾನುಸಾರ ಖರೀದಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.**

*******

**ವಿಷಯ ಸಂಖ್ಯೆ: 173.09**

**ವಿಷಯ:** Digital Academic Platform ಸೇವೆಗೆ ಸಂಬಂಧಿಸಿದ ಹುಂಡಿ ಪಾವತಿಸುವ ಬಗ್ಗೆ.

*****

ಕರಾಮುವಿಯಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ಸಂಪೂರ್ಣ Paperless ಮಾಡಿ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರುಗಳು ನಿರಂತರವಾಗಿ ಸಂಪರ್ಕದಲ್ಲಿದ್ದು ಸಮಾಲೋಚನೆ ನಡೆಸಲು ಅನುಕೂಲವಾಗುವ ಉದ್ದೇಶದಿಂದ Digital Academic Platform ಸೇವೆಯನ್ನು ವಿವಿಯಲ್ಲಿ ಅನುಷ್ಠಾನಗೊಳಿಸುವ ಸಂಬಂಧ 170.34 ನೇ ವ್ಯವಸ್ಥಾಪನಾ ಮಂಡಳಿ ಸಭೆಯ ವಿಷಯದ ತೀರ್ಮಾನ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ನಿಯಾಮಾನುಸಾರ ದಿನಾಂಕ: 09.03.2023 ರಂದು GEM ಮೂಲಕ ಬಿಡ್ ಆಹ್ವಾನಿಸಿ M/s. Edu Easy India Private Limited, Hubballi ರವರೊಂದಿಗೆ **ರೂ. 287/–** (ಎರಡು ನೂರ ಎಂಬತ್ತೇಳು ರೂಪಾಯಿಗಳು ಮಾತ್ರ, ಎಲ್ಲಾ ತೆರಿಗೆ ಸೇರಿ) Per Student per Academic Year ಗಳಿಗೆ ದಿನಾಂಕ: 29.03.2023 ರಂದು ಒಡಂಬಡಿಕೆ ಮಾಡಿಕೊಂಡು ಕಾರ್ಯಾದೇಶ ನೀಡಲಾಗಿರುತ್ತದೆ.

ಮುಂದುವರೆದು, ಸದರಿ ಸಂಸ್ಥೆಯವರು ವಿವಿಯ ಕಾರ್ಯಾದೇಶ ಹಾಗೂ ಒಡಂಬಡಿಕೆಯಂತೆ Digital Academic Platform ಸೇವೆಗೆ ಸಂಬಂಧಿಸಿದಂತೆ ಎಲ್ಲಾ Modules ಗಳನ್ನು ಅಭಿವೃದ್ಧಿಪಡಿಸಿ, ಪ್ರಸ್ತುತ ವಿವಿಯಲ್ಲಿ ಪ್ರವೇಶಾತಿ ಪಡೆದಿರುವ 60,951 (Fresh Students: 39,549 ಹಾಗೂ Renewal Students: 21,402) ವಿದ್ಯಾರ್ಥಿಗಳ ಮಾಹಿತಿಯನ್ನು Digital Academic Platform ನಲ್ಲಿ ಅಳವಡಿಸಿ ಕಾರ್ಯಾ ಸಂಪೂರ್ಣವಾಗಿರುವ ಬಗ್ಗೆ ದಿನಾಂಕ: 24.07.2023 ರಂದು ಮಾಹಿತಿ ನೀಡಿ 60,951 ವಿದ್ಯಾರ್ಥಿಗಳಿಗೆ ಪ್ರತಿ ವಿದ್ಯಾರ್ಥಿಗೆ **ರೂ. 287/–** (ಎರಡು ನೂರ ಎಂಬತ್ತೇಳು ರೂಪಾಯಿಗಳು ಮಾತ್ರ, ಎಲ್ಲಾ ತೆರಿಗೆ ಸೇರಿ) ರಂತೆ ಒಟ್ಟು ಮೊತ್ತ ರೂ. **1,74,92,912.62/–(ಒಂದು ಕೋಟಿ ಎಪ್ಪತ್ತನಾಲ್ಕು ಲಕ್ಷದ ತೊಂಬತ್ತೆರಡು ಸಾವಿರದ ಒಂಬೈನೂರ ಹನ್ನೆರಡು ರೂಪಾಯಿಗಳು ಅರವತ್ತೆರಡು ಪೈಸೆ ಮಾತ್ರ)** ಗಳ ಹುಂಡಿಯನ್ನು ದಿನಾಂಕ: 27.07.2023 ರಂದು ಸಲ್ಲಿಸಿ ಹುಂಡಿ ಪಾವತಿ ಕೋರಿರುತ್ತಾರೆ. ಸದರಿ ಹುಂಡಿಯನ್ನು ಪಾವತಿಸುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

**ಕುಲಪತಿಗಳು** **ಕುಲಸಚಿವರು.**

ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, **M/s. Edu Easy India Private Limited, Hubballi,** ಇವರು ವಿವಿಯಲ್ಲಿ ಪ್ರವೇಶಾತಿ ಪಡೆದಿರುವ **60,951** ವಿದ್ಯಾರ್ಥಿಗಳ ಮಾಹಿತಿಯನ್ನು **Digital Academic Platform** ನಲ್ಲಿ ಅಳವಡಿಸುವ ಕಾರ್ಯವನ್ನು ಪೂರ್ಣಗೊಳಿಸಿ ನಿರ್ವಹಿಸಿ ಪ್ರತಿ ವಿದ್ಯಾರ್ಥಿಗೆ ಎಲ್ಲಾ ತೆರಿಗೆ ಸೇರಿ ರೂ. **287/-** ರಂತೆ ಒಟ್ಟು ಮೊತ್ತ ರೂ. **1,74,92,912.62/-**(ಒಂದು ಕೋಟಿ ಎಪ್ಪತ್ತನಾಲ್ಕು ಲಕ್ಷದ ತೊಂಬತ್ತೆರಡು ಸಾವಿರದ ಒಂಬೈನೂರ ಹನ್ನೆರಡು ರೂಪಾಯಿಗಳು ಅರವತ್ತೆರಡು ಪೈಸೆ ಮಾತ್ರ) ಗಳ ಹುಂಡಿಯನ್ನು ಸದರಿ ಸಂಸ್ಥೆಯವರಿಗೆ ನಿಯಮಾನುಸಾರ ಪಾವತಿಸಲು ಸಭೆಯು ಒಪ್ಪಿತು.

*******

**ವಿಷಯ ಸಂಖ್ಯೆ: 173.10**

**ವಿಷಯ:** ಕರಾಮುವಿ ಕಾಯ್ದೆ 1992ರ ಕಲಂ (2) ಅನ್ವಯ KSOU University (partial amendment to the post of Stenographer statutes-2022 (Amendment)ರ ಪರಿನಿಯಮವನ್ನು ಪರಿಶೀಲಿಸಿ ವರದಿ ನೀಡಿರುವ ಕುರಿತು.

*******

ವಿಶ್ವವಿದ್ಯಾನಿಲಯವು ಪರಿನಿಯಮ ಸಂಖ್ಯೆ XXIX ರಲ್ಲಿ ಶೀಘ್ರಲಿಪಿಗಾರರ ಹುದ್ದೆ ನೇಮಕಾತಿ ಹಾಗೂ ಪದೋನ್ನತಿಗೆ ಸಂಬಂಧಿಸಿದಂತೆ ಕೆಲವು ಮಾನದಂಡಗಳನ್ನು ನಿಗಧಿಪಡಿಸಿದ್ದು, ಪ್ರಸ್ತುತ ಅಳವಡಿಸಿಕೊಂಡಿರುವ ಪರಿನಿಯಮದಲ್ಲಿನ ಮಾನದಂಡಗಳನ್ನು ರಾಜ್ಯ ಸರ್ಕಾರವು ನಿಗದಿಪಡಿಸಿರುವ ಮಾನದಂಡಗಳಿಗೆ ಅನುಗುಣವಾಗಿ ಕರಾಮುವಿ ಕಾಯ್ದೆ 1992ರ ಕಲಂ (2) ಅನ್ವಯ KSOU University (partial amendment to the post of Stenographer statutes-2022 (Amendment)ರ ಪರಿನಿಯಮದ ಭಾಗಶಃ ತಿದ್ದುಪಡಿ ಮಾಡಿರುವ ಪರಿನಿಯಮವನ್ನು ಪರಿಶೀಲಿಸಿ ವರದಿ ನೀಡಲು ಆಂತರಿಕ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಪರಿಶೀಲಿಸಿ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ನೀಡಿದ್ದು, ಈ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಚರ್ಚಿಸಿ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*******

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಕರಾಮುವಿ ಕಾಯ್ದೆ 1992ರ ಕಲಂ (2) ಅನ್ವಯ KSOU University (partial amendment to the post of Stenographer statutes-2022 (Amendment)ರ ಪರಿನಿಯಮದ ಭಾಗಶಃ ತಿದ್ದುಪಡಿ ಮಾಡಿರುವ ಪರಿನಿಯಮವನ್ನು ಸಮಿತಿಯು ಪರಿಶೀಲಿಸಿ ನೀಡಿರುವ ವರದಿಯನ್ನು ಸಭೆಯು ಸರ್ವಾನುಮತದಿಂದ ಒಪ್ಪಿತು.**

*******

ಕುಲಪತಿಗಳು　　　　　　　　　　　　　　　　　　　　ಕುಲಸಚಿವರು

**Subject No: 173.11**

The approval of the Board of Management is sought for the financial support for the visit of Prof. Sharanappa V. Halse, Hon'ble Vice-Chancellor and Dr. Niranjan Raj S, Director-CIQA to Université de Paris and Sorbonne Université Paris during 18th to 25th August 2023 (including travel days); and also, the visit of Prof. Sharanappa V. Halse, Hon'ble Vice-Chancellor; Prof. K.L.N. Murthy, Registrar; Dr. Niranjan Raj S, Director-CIQA; and Dr. A. Khadar Pasha, Finance officer to European International University operations headquarters, Bangkok, Thailand during 26th to 29th August 2023 (including travel days) both the visits are aimed to develop cooperation for faculty exchange, programme designing for ODL and Online and discussing of MOU. Hon'ble Vice-Chancellor is required to seek permission from Honorable Chancellor of Karnataka State Open University for the proposed visit through Administrative Department. The whole expenditure of the above foreign trips, which is being worked out, will be met out of the KSOU grants.

**Statement of Expenditure (Approximately)-** Sorbonne Université Paris

| Sl No | Purpose | Amount |
|---|---|---|
| 1 | Traveling & Visa Charges (for 2 persons) | ₹. 250000-00 |
| 2 | D.A (boarding, lodging, incidental expenses and internal travel within the Country) (@ 250 Euros per day per person) | ₹. 500000-00 |
| 3 | Miscellaneous (for two persons) | ₹. 50000-00 |
| | **Total** | ₹. 800000-00 |
| | **(Rupees eight lakhs only)** | |

**Statement of Expenditure (Approximately) -** European International University operations headquarters, Bangkok, Thailand

| Sl No | Purpose | Amount |
|---|---|---|
| 1 | Traveling & Visa Charges (for 4 persons) | ₹. 160000-00 |
| 2 | D.A (boarding, lodging, incidental expenses and internal travel within the Country) (@ 200 Dollars per day per person) | ₹. 270000-00 |
| 3 | Miscellaneous (for four persons) | ₹. 50000-00 |
| | **Total** | ₹. 480000-00 |
| | **(Rupees Four lakhs eighty thousand only)** | |

ಕುಲಪತಿಗಳು

ಕುಲಸಚಿವರು

ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ದಿನಾಂಕ: 18.08.2023 ರಿಂದ 25.08.2023 ರವರೆಗೆ (Including travel days) ಪ್ರೊ. ಶರಣಪ್ಪ ವಿ. ಹಲಸೆ., ಮಾನ್ಯ ಕುಲಪತಿಗಳು, ಕರಾಮುವಿ, ಮೈಸೂರು., ಹಾಗೂ ಡಾ. ನಿರಂಜನ್ ರಾಜ್ ಎಸ್. ನಿರ್ದೇಶಕರು, CIQA., ಕರಾಮುವಿ, ಮೈಸೂರು., ಇವರು Université de Paris and Sorbonne Université Paris., ಮತ್ತು ದಿನಾಂಕ: 26.08.2023 ರಿಂದ 29.08.2023 ರವರೆಗೆ (Including travel days) ಪ್ರೊ. ಶರಣಪ್ಪ ವಿ. ಹಲಸೆ., ಮಾನ್ಯ ಕುಲಪತಿಗಳು., ಪ್ರೊ ಕೆ.ಎಲ್.ಎನ್. ಮೂರ್ತಿ., ಕುಲಸಚಿವರು, ಡಾ. ಎ. ಖಾದರ್ ಪಾಷಾ., ಹಣಕಾಸು ಅಧಿಕಾರುಗಳು, ಕರಾಮುವಿ, ಮೈಸೂರು ಹಾಗೂ ಡಾ. ನಿರಂಜನ್ ರಾಜ್ ಎಸ್. ನಿರ್ದೇಶಕರು, ಕರಾಮುವಿ, ಮೈಸೂರು., ಇವರುಗಳು **European International University operations headquarters, Bangkok, Thailand,** ದೇಶಗಳಿಗೆ ಭೇಟಿ ನೀಡಿ ಅಧ್ಯಾಪಕರ ವಿನಿಮಯಕ್ಕಾಗಿ ಸಹಕಾರವನ್ನು ಅಭಿವೃದ್ಧಿ ಪಡಿಸಲು, ODL ಮತ್ತು Online ಕಾರ್ಯಕ್ರಮ ವಿನ್ಯಾಸ ಹಾಗೂ ಒಡಂಬಡಿಕೆ ಕುರಿತು ಚರ್ಚಿಸುವ ಸಲುವಾಗಿ ಸಭೆಯು ಅನುಮತಿ ನೀಡಿ ಮೇಲಿನ ಎರಡು ವಿದೇಶ ಪ್ರವಾಸಗಳ ಸಂಪೂರ್ಣ ವೆಚ್ಚವನ್ನು ಕರಾಮುವಿ ಅನುದಾನದಿಂದ ಭರಿಸಲು ಅನುಮೋದನೆ ನೀಡಿತು.

*******

**ವಿಷಯ ಸಂಖ್ಯೆ: 173.12**

ವಿಷಯ:– 31ನೇ ಕಾಗದ ಗುಣಮಟ್ಟ ಪರೀಕ್ಷೆ ಸಮಿತಿ ಸಭೆಯ ನಡವಳಿಯನ್ನು ಅನುಮೋದಿಸುವ ಬಗೆಗೆ.

*******

2022–23ನೇ ಸಾಲಿನ ಅಧ್ಯಯನ ಸಾಮಗ್ರಿಗಳು ಹಾಗೂ ಕೊರತೆಯಿರುವ ಹಳೆಯ ಪಠ್ಯಕ್ರಮದ ಅಧ್ಯಯನ ಸಾಮಗ್ರಿಗಳ ಮುದ್ರಣಕ್ಕೆ ಸಂಬಂಧಿಸಿದಂತೆ **Government e Marketplace (GEM)** ಟೆಂಡರ್ ಮೂಲಕ ವಿವಿ ನಿಲಯವು ನಿಗದಿಪಡಿಸಿರುವ ದರಗಳಲ್ಲಿ ಖಾಸಗಿ ಮುದ್ರಕರಾದ ಮೆ॥ **ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು.** ಇವರಿಂದ ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸಿ, ಸರಬರಾಜು ಮಾಡಿಕೊಂಡು ವಿದ್ಯಾರ್ಥಿಗಳಿಗೆ ವಿತರಿಸಲಾಗಿರುತ್ತದೆ.

ಮುಂದುವರೆದು ಮುದ್ರಕರು ಸಲ್ಲಿಸಿರುವ ಭಾಗಶಃ ಹುಂಡಿಗಳನ್ನು ಪಾವತಿಸುವ ಸಂಬಂಧ ಕಾಗದ ಗುಣಮಟ್ಟ ಪರೀಕ್ಷೆಯ ಉದ್ದೇಶದಿಂದ ಪ್ರತಿ ಹುಂಡಿಯಲ್ಲಿ ಶೇಕಡ 25ರಷ್ಟು ಮೊತ್ತವನ್ನು ವಿವಿ ನಿಲಯವು ಉಳಿಸಿಕೊಂಡಿದ್ದು, ವಿವಿ ನಿಲಯವು ರಚಿಸಿರುವ ತಾಂತ್ರಿಕ ತಜ್ಞರನ್ನು ಒಳಗೊಂಡಂತಹ ಕಾಗದ ಗುಣಮಟ್ಟ ಆಂತರಿಕ ಸಮಿತಿಯ ಅನುಸಾರ ಉಳಿಕೆ ಶೇ 25ರಷ್ಟು ಮೊತ್ತವನ್ನು ಮುದ್ರಕರಿಗೆ ಪಾವತಿಸುವ ಬಗ್ಗೆ ಕರಾರು ಒಪ್ಪಂದದಲ್ಲಿ ತಿಳಿಸಲಾಗಿರುತ್ತದೆ, ಅದರಂತೆ ದಿನಾಂಕ: 20.07.2023 ರಂದು ಕಾಗದ ಗುಣಮಟ್ಟ ಪರೀಕ್ಷೆ ಸಭೆಯನ್ನು ನಡೆಸಲಾಗಿದ್ದು, ಸದರಿ ಸಭೆಯಲ್ಲಿ ಸರ್ಕಾರಿ ಮುದ್ರಣಾಲಯದ ತಾಂತ್ರಿಕ ತಜ್ಞರನ್ನು ಒಳಗೊಂಡಂತಹ ಸಮಿತಿಯ ಉಪಸ್ಥಿತಿಯಲ್ಲಿ ಸಮಿತಿಯು ವಿವಿನಿಲಯದ ಟೆಂಡರ್‌ನ ನಿಯಮ ಮತ್ತು ಷರತ್ತಿನಲ್ಲಿ ಅಳವಡಿಸಿಕೊಂಡಿರುವ

ಕುಲಪತಿಗಳು

ಕುಲಸಚಿವರು.

Specifications (**ಕಾಗದ ಗುಣಮಟ್ಟ ಪರೀಕ್ಷೆಗೆ ಅಳವಡಿಸಿಕೊಂಡಿರುವ ಮಾನದಂಡ ಮತ್ತು ದಂಡ ಕಟಾಯಿಸುವ ಬಗ್ಗೆ**) ನಂತೆ ಮುದ್ರಕರು ಮುದ್ರಿಸಿ ಸರಬರಾಜು ಮಾಡಿರುವ ಅಧ್ಯಯನ ಸಾಮಗ್ರಿಗಳ ಕಾಗದ ಗುಣಮಟ್ಟ ಪರೀಕ್ಷೆಯನ್ನು ಪರಿಶೀಲಿಸಿ, ದೃಢೀಕರಿಸಿದ್ದು, ವಿವಿ ನಿಲಯವು ಉಳಿಸಿಕೊಂಡಿರುವ ಶೇಕಡ 25ರಷ್ಟು ಮೊತ್ತವನ್ನು (**ದಂಡವಿದ್ದಲ್ಲಿ ಕಟಾಯಿಸಿಕೊಂಡು**) ನಿಯಮಾನುಸಾರ ಆಡಳಿತಾತ್ಮಕ ಅನುಮೋದನೆ ಪಡೆದು ಪಾವತಿಸಬಹುದೆಂದು ಶಿಫಾರಸ್ಸು ಮಾಡಿರುತ್ತದೆ. ಹಾಗಾಗಿ ಸಂಬಂಧಪಟ್ಟ ಮುದ್ರಕರಿಗೆ 05 ಹುಂಡಿಗಳಲ್ಲಿ ಕಟಾಯಿಸಿಕೊಂಡಿರುವ ಶೇಕಡ 25ರಷ್ಟು ಮೊತ್ತ ರೂ. 97,87,835.00 ಗಳಲ್ಲಿ ದಂಡದ ಮೊತ್ತವಾದ ರೂ. 1,35,852.00ಗಳನ್ನು ಕಟಾಯಿಸಿಕೊಂಡು ಉಳಿಕೆ ಮೊತ್ತ ರೂ. 96,51,983.00ಗಳನ್ನು (ರೂಪಾಯಿ ತೊಂಬತ್ತಾರು ಲಕ್ಷದ ಐವತ್ತೊಂದು ಸಾವಿರದ ಒಂಬೈನೂರ ಎಂಬತ್ತ ಮೂರು ಮಾತ್ರ) ಗಳನ್ನು ಸಂಬಂಧಪಟ್ಟ ಮುದ್ರಕರಿಗೆ ಪಾವತಿಸುವ ಸಂಬಂಧ ಕಾಗದ ಗುಣಮಟ್ಟ ಪರೀಕ್ಷೆ ಸಮಿತಿ ಸಭೆಯ ನಡವಳಿಯನ್ನು ಘನ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚೆ / ನಿರ್ಣಯಕ್ಕಾಗಿ ಮಂಡಿಸಲಾಗಿದೆ.

******

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, 31ನೇ ಕಾಗದ ಗುಣಮಟ್ಟ ಪರೀಕ್ಷೆ ಸಮಿತಿ ಸಭೆಯ ನಡಾವಳಿಯನ್ನು 173ನೇ ವ್ಯವಸ್ಥಾಪನಾ ಮಂಡಳಿಯ ಸಾಮಾನ್ಯ ಸಭೆಯಲ್ಲಿ ಅನುಮೋದಿಸಿತು.**

*******

## ವಿಷಯ ಸಂಖ್ಯೆ: 173.13

**ವಿಷಯ: ಕರಾಮುವಿ ನಿಲಯದ ವಿವಿಧ ವಿಭಾಗಗಳ ತರಗತಿ ಕೊಠಡಿಗಳಲ್ಲಿ Interactive display board ಗಳನ್ನೊಳಗೊಂಡ Smart Class Room ಗಳನ್ನು ನಿರ್ಮಿಸುವುದರ ಬಗ್ಗೆ.**

*******

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವಿಜ್ಞಾನ ವಿಭಾಗ ಸೇರಿದಂತೆ ಹಲವಾರು ವಿಷಯಗಳು(Course) ನಡೆಯುತ್ತಿದ್ದು, ಸದರಿ ತರಗತಿಗಳನ್ನು PPT ಯ ಮುಖಾಂತರ ನಡೆಸಬೇಕಾಗಿರುತ್ತದೆ. ಆದ್ದರಿಂದ ವಿಶ್ವವಿದ್ಯಾನಿಲಯದ ತರಗತಿ ಕೊಠಡಿಗಳಲ್ಲಿ Interactive display board, Computer ಮತ್ತು ಪ್ರೊಜೆಕ್ಟರ್ ಅನ್ನು ಒಳಗೊಂಡಿರುವ ಸ್ಟ್ಯಾಂಡರ್ಡ್ Smart Class Room ಗಳನ್ನು ನಿರ್ಮಿಸಬೇಕಾಗಿರುತ್ತದೆ. ಆದ್ದರಿಂದ ಕರಾಮುವಿ ನಿಲಯದ ಪ್ರಾದೇಶಿಕ ಕೇಂದ್ರಗಳು, ನಳ, ಗಂಗಾ ಮತ್ತು ವಿಜ್ಞಾನ ಭವನ ಹಾಗೂ ಇತರೆ ವಿಭಾಗಗಳಲ್ಲಿ Interactive display board ಗಳನ್ನೊಳಗೊಂಡ ಸುಮಾರು 27 ಸಂಖ್ಯೆಯ Smart Class Room ಗಳನ್ನು ತರಗತಿ ಕೊಠಡಿಗಳಲ್ಲಿ ನಿರ್ಮಿಸಲು ಪ್ರಸ್ತುತ ಮಾರುಕಟ್ಟೆಯ ದರದ ಅನುಸಾರ ಅಂದಾಜು ಮೊತ್ತ ರೂ. 100.00 ಲಕ್ಷಗಳು (GST ಸಹಿತ) ವೆಚ್ಚ ತಗಲುತ್ತದೆ. ಆದ್ದರಿಂದ ಸದರಿ ಕೆಲಸವನ್ನು ನಿಯಮಾನುಸಾರ KPPP ಮುಖಾಂತರ ಟೆಂಡರ್ ಆಹ್ವಾನಿಸಿ ಅಥವಾ ಸರ್ಕಾರಿ ಸ್ವಾಮ್ಯದ GEM Portal ಮುಖಾಂತರ ನಿರ್ವಹಿಸಲು ಸದರಿ ವಿಷಯವನ್ನು ಘನ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ

*******

**ಕುಲಪತಿಗಳು** **ಕುಲಸಚಿವರು**

ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಕರಾಮುವಿ ನಿಲಯದ ಪ್ರಾದೇಶಿಕ ಕೇಂದ್ರಗಳಲ್ಲಿ ಹಾಗೂ ವಿ.ವಿ. ನಿಲಯದ ಆವರಣದಲ್ಲಿರುವ ನಳ, ಗಂಗಾ, ವಿಜ್ಞಾನ ಭವನ ಹಾಗೂ ಇತರೆ ವಿವಿಧ ವಿಭಾಗಗಳ ತರಗತಿ ಕೊಠಡಿಗಳಲ್ಲಿ, Interactive display board ಗಳನ್ನೊಳಗೊಂಡ ಸುಮಾರು 27 ಸಂಖ್ಯೆಯ Smart Class Room ಗಳನ್ನು ನಿರ್ಮಿಸಲು ಪ್ರಸ್ತುತ ಮಾರುಕಟ್ಟೆಯ ದರದನ್ವಯ ನಿಯಮಾನುಸಾರ Public Procurement Portal ಮುಖಾಂತರ ಟೆಂಡರ್ ಆಹ್ವಾನಿಸಿ ಅಥವಾ ಸರ್ಕಾರಿ ಸ್ವಾಮ್ಯದ GEM Portal ಮುಖಾಂತರ ಕಾರ್ಯಗಳನ್ನು ನಿರ್ವಹಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

*******

**ವಿಷಯ ಸಂಖ್ಯೆ: 173.14**

**ವಿಷಯ: ಕಲ್ಯಾಣ ಕರ್ನಾಟಕ ಭಾಗದಲ್ಲಿ ಪ್ರಾದೇಶಿಕ ಕೇಂದ್ರ ಕಟ್ಟಡ ನಿರ್ಮಿಸುವ ಬಗ್ಗೆ.**

ಕರಾಮುವಿಯು "ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ" ಎಂಬ ಧ್ಯೇಯದೊಂದಿಗೆ ಉನ್ನತ ಶಿಕ್ಷಣದಿಂದ ಕಾರಣಾಂತರಗಳಿಂದ ವಂಚಿತರಾಗಿರುವ ಶಿಕ್ಷಣಾರ್ಥಿಗಳಿಗೆ ಉನ್ನತ ಶಿಕ್ಷಣವನ್ನು ದೂರಶಿಕ್ಷಣದಡಿ ನೀಡುವ ಉದ್ದೇಶದಿಂದ 1996ರಲ್ಲಿ ಸ್ಥಾಪನೆಗೊಂಡು ಅಂದಿನಿಂದ ಕಾರ್ಯನಿರ್ವಹಿಸುತ್ತಾ ಬಂದಿರಿತ್ತದೆ. ರಾಜ್ಯದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಮಾತ್ರ ದೂರ ಶಿಕ್ಷಣದಡಿ ಶಿಕ್ಷಣವನ್ನು ನೀಡುವ ಏಕೈಕ ಸಂಸ್ಥೆಯಾಗಿದ್ದು ಶಿಕ್ಷಣ ವಂಚಿತ ವಿದ್ಯಾರ್ಥಿಗಳಿಗೆ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ, SC/ST ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಶಿಕ್ಷಣದ ಸೌಲಭ್ಯವನ್ನು ಒದಗಿಸಲು ಕರಾಮುವಿಯು ಪ್ರತಿಯೊಂದು ಜಿಲ್ಲೆಯಲ್ಲಿಯೂ ಕಾರ್ಯನಿರ್ವಹಿಸಬೇಕಿರುತ್ತದೆ, ಮುಖ್ಯವಾಗಿ ಶಿಕ್ಷಣ ವಿಭಾಗದಲ್ಲಿ ಅತೀ ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗದ ಪ್ರಾದೇಶಿಕ ಕೇಂದ್ರವಿಲ್ಲದ ಕಾರಣ ಹಾಗೂ Gross Enrollment Ratio ಹೆಚ್ಚಿಸಲು ಕಲ್ಯಾಣ ಕರ್ನಾಟಕ ಭಾಗದಲ್ಲಿ ಎಲ್ಲಾ ಜಿಲ್ಲೆಗಳಲ್ಲಿಯೂ ಪ್ರಾದೇಶಿಕ ಕೇಂದ್ರ ಕಛೇರಿ ಸ್ಥಾಪಿಸಿ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಸೌಲಭ್ಯವನ್ನು ಕಲ್ಪಿಸಬೇಕಿರುತ್ತದೆ.

ಈ ಸಂಬಂಧ ಕಲ್ಯಾಣ ಕರ್ನಾಟಕ ಭಾಗದಲ್ಲಿ ಈಗಾಗಲೇ ಬಳ್ಳಾರಿ ಜಿಲ್ಲೆಯಲ್ಲಿ ಕರಾಮುವಿ ಪ್ರಾದೇಶಿಕ ಕಛೇರಿ ನಿರ್ಮಿಸಿ ಕಾರ್ಯನಿರ್ವಹಿಸುತ್ತಿದ್ದು, ಉಳಿದ ಜಿಲ್ಲೆಗಳಾದ ಬೀದರ್, ಗುಲ್ಬರ್ಗ, ರಾಯಚೂರು, ಕೊಪ್ಪಳ, ಯಾದಗಿರಿ, ವಿಜಯನಗರ ಜಿಲ್ಲೆಗಳಲ್ಲಿ ಪ್ರಾದೇಶಿಕ ಕೇಂದ್ರ ಕಛೇರಿ ಸ್ಥಾಪನೆಯಾಗಬೇಕಿದ್ದು ಸದರಿ 6 ಜಿಲ್ಲೆಗಳಲ್ಲಿ ನಿವೇಶನ ಖರೀದಿಸಿ ಪ್ರಾದೇಶಿಕ ಕೇಂದ್ರ ಕಛೇರಿ ಕಟ್ಟಡ ನಿರ್ಮಿಸಲು ಈಗಾಗಲೇ ವಿವಿನಿಲಯದ ವತಿಯಿಂದ ಸರ್ಕಾರವು ಕಲ್ಯಾಣ ಕರ್ನಾಟಕಕ್ಕೆ ಘೋಷಿಸಿರುವ ಅನುದಾನದಲ್ಲಿ ಅವಶ್ಯಕವಿರುವ ರೂ. 370.00 ಕೋಟಿ ಅನುದಾನವನ್ನು ಬಿಡುಗಡೆಗೊಳಿಸುವಂತೆ ಸರ್ಕಾರದ ಸಂಬಂಧಪಟ್ಟ ಸಚಿವರುಗಳಿಗೆ ಪತ್ರದ ಮುಖಾಂತರ ಕೋರಲಾಗಿರುತ್ತದೆ ಹಾಗೂ ಈ ಸಂಬಂಧ ಸರ್ಕಾರದಿಂದ ಬಿಡುಗಡೆಗೊಳಿಸುವ ಅನುದಾನಕ್ಕೆ ಅನುಗುಣವಾಗಿ ಸರ್ಕಾರದ ಅನುದಾನದ ಕೊರತೆಯಾದಲ್ಲಿ ಕಟ್ಟಡ ಕಾಮಗಾರಿಯನ್ನು ನಿರ್ವಹಿಸಲು ವಿವಿನಿಲಯದ ಕ್ರೂಡಿಕೃತ ಸಂಪನ್ಮೂಲದಿಂದ ಉಪಯೋಗಿಸಿಕೊಳ್ಳುವುದರ ಬಗ್ಗೆ ವಿಷಯವನ್ನು ಚರ್ಚೆಗೆ ಮಂಡಿಸಲಾಗಿದೆ.

*******

**ಕುಲಪತಿಗಳು** **ಕುಲಸಚಿವರು**

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಸ್ಥಾಪನೆಯಾಗಬೇಕಾಗಿರುವ ಕಲ್ಯಾಣ ಕರ್ನಾಟಕ ಭಾಗದ ಬೀದರ್, ಗುಲ್ಬರ್ಗ, ರಾಯಚೂರು, ಕೊಪ್ಪಳ, ಯಾದಗಿರಿ, ವಿಜಯನಗರ ಜಿಲ್ಲೆಗಳಲ್ಲಿ ನಿವೇಶನವನ್ನು ಖರೀದಿಸಿ ಪ್ರಾದೇಶಿಕ ಕೇಂದ್ರ ಕಛೇರಿಗಳಲ್ಲಿ ಕಟ್ಟಡ ನಿರ್ಮಿಸಲು ಸರ್ಕಾರವು ಕಲ್ಯಾಣ ಕರ್ನಾಟಕಕ್ಕೆ ಘೋಷಿಸಿರುವ ಅನುದಾನಕ್ಕೆ ಅನುಗುಣವಾಗಿ, ಸರ್ಕಾರದ ಅನುದಾನದ ಕೊರತೆಯಾದಲ್ಲಿ ಕಟ್ಟಡ ಕಾಮಗಾರಿಯನ್ನು ನಿರ್ವಹಿಸಲು ವಿವಿನಿಲಯದ ಕ್ರೋಡೀಕೃತ ಸಂಪನ್ಮೂಲದಿಂದ ಉಪಯೋಗಿಸಿಕೊಳ್ಳಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.**

*******

**ವಿಷಯ ಸಂಖ್ಯೆ:–173.15**

**ವಿಷಯ:– ವಿವಿನಿಲಯದ 2023–24ನೇ ಸಾಲಿನ ಸಿದ್ಧಪಾಠಗಳನ್ನು ಮುದ್ರಿಸಲು ಅಗತ್ಯವಿರುವ ಹೆಚ್ಚುವರಿ ಮೊತ್ತ ರೂ. 2.60 ಕೋಟಿಗಳನ್ನು ಪಾವತಿಸುವ ಬಗ್ಗೆ.**

*******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2022–23ನೇ ಶೈಕ್ಷಣಿಕ ಸಾಲಿನ (ಜುಲೈ/ಜನವರಿ ಅವೃತ್ತಿಯಲ್ಲಿ) ಪ್ರವೇಶಾತಿ ಹೊಂದಿರುವ ವಿದ್ಯಾರ್ಥಿಗಳಿಗೆ ವಿತರಿಸಲು ಅಗತ್ಯವಿರುವ ಸಿದ್ಧಪಾಠಗಳು ಮತ್ತು ದಾಸ್ತಾನಿನಲ್ಲಿ ಕೊರತೆಯಾಗಿರುವ ಹಳೆಯ ಪಠ್ಯಕ್ರಮಗಳಾದ ಬಿ.ಎ, ಬಿಕಾಂ, ಪಿಜಿ ಸರ್ಟಿಫಿಕೇಟ್, ಬಿಇಡಿ, ಎಂಬಿಎ, ಹಾಗೂ ಬಿ.ಲಿಬ್.ಐ.ಎಸ್ಸಿ (ಕ್ರ.ಮಾ) ಶಿಕ್ಷಣಕ್ರಮಗಳ ಅಧ್ಯಯನ ಸಾಮಾಗ್ರಿಗಳನ್ನು ಮುದ್ರಿಸಿಕೊಂಡು ವಿದ್ಯಾರ್ಥಿಗಳಿಗೆ ವಿತರಿಸಬೇಕಾಗಿದೆ. ಈ ಹಿನ್ನಲೆಯಲ್ಲಿ 2022–23 ನೇ ಶೈಕ್ಷಣಿಕ ಸಾಲಿನ CBCS ಅಧ್ಯಯನ ಸಾಮಾಗ್ರಿಗಳು ಹಾಗೂ ಕೊರತೆ ಇರುವ ಹಳೆಯ ಪಠ್ಯಕ್ರಮಗಳ ಅಧ್ಯಯನ ಸಾಮಾಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಳ್ಳಲು 2020–21ನೇ ಸಾಲಿನ e-procurement tender ಪ್ರಕ್ರಿಯೆಯಲ್ಲಿ ನಿಗದಿಪಡಿಸಲಾಗಿದ್ದ ದರಗಳ ಅನ್ವಯ ಅಂದಾಜು ಮೊತ್ತ ರೂ. 8,91,41,256 ಗಳಾಗಿದ್ದು ಇದಕ್ಕೆ ಶೇ.10% ರಷ್ಟನ್ನು ಹೆಚ್ಚಿಸಿಕೊಂಡು ರೂ. 9,87,15,382 ಗಳಾಗಿರುವುದರಿಂದ ಒಟ್ಟಾರೆ 10.00 ಕೋಟಿಗಳಿಗೆ ಸಂಬಂಧಪಟ್ಟ ಮುದ್ರಣ ಕೆಲಸವನ್ನು ನಿರ್ವಹಿಸಲು ಸದರಿ ವಿಷಯವನ್ನು ವಿವಿನಿಲಯದ ಘನವ್ಯವಸ್ಥಾಪನಾ ಮಂಡಳಿಯ 170ನೇ ಸಾಮಾನ್ಯ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿತ್ತು.

ಸದರಿ ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿದ ಸಭೆಯು 2022–23ನೇ ಸಾಲಿನ CBCS ಅಧ್ಯಯನ ಸಾಮಾಗ್ರಿಗಳು ಹಾಗೂ ಕೊರತೆ ಇರುವ ಹಳೆಯ ಪಠ್ಯಕ್ರಮದ ಅಧ್ಯಯನ ಸಾಮಾಗ್ರಿಗಳ ಮುದ್ರಣ ಸಂಬಂಧ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಗೆ ಅನುಗುಣವಾಗಿ e-procurement ಟೆಂಡರ್ ಆಹ್ವಾನಿಸಿ ನಿರ್ವಹಿಸಲು ಅನುಮೋದನೆಯನ್ನು ನೀಡಿರುತ್ತದೆ.

ಮುಂದುವರೆದು ಸದರಿ ಕೆಲಸವನ್ನು ವಿವಿನಿಲಯದ ನಿಯಮಾನುಸಾರ ಕ್ರಮವಹಿಸಿ ಸರ್ಕಾರಿ ಸ್ವಾಮ್ಯದ Govt E-market place ನ ಮೂಲಕ ನಿರ್ವಹಿಸಿದ್ದು ಸದರಿ ಕೆಲಸಕ್ಕಾಗಿ ಈ ಹಿಂದೆ ವಿವಿನಿಲಯದ ಘನವ್ಯವಸ್ಥಾಪನಾ ಮಂಡಳಿ 170ನೇ ಸಾಮಾನ್ಯ ಸಭೆಯ ಮೂಲಕ ರೂ. 10.00 ಕೋಟಿಗಳಿಗೆ ಅನುಮೋದನೆಯನ್ನು ಪಡೆಯಾಲಾಗಿದ್ದು ಇದರಲ್ಲಿ ರೂ.4.00 ಕೋಟಿಗಳು ಮಾತ್ರಗಳನ್ನು ವೆಚ್ಚ ಮಾಡಲಾಗಿದ್ದು ಇದರಲ್ಲಿ ಉಳಿಕೆ ರೂ. 6.00 ಕೋಟಿಗಳು ಬಾಕಿ ಉಳಿದಿರುತ್ತದೆ.

**ಕುಲಪತಿಗಳು** **ಕುಲಸಚಿವರು**

ಪ್ರಸ್ತುತ ವಿ.ವಿ ನಿಲಯದ 2023-24ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಕೋರ್ಸುಗಳಿಗೆ ನೂತನವಾಗಿ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಸಿದ್ಧಪಾಠಗಳನ್ನು ವಿತರಿಸಲು ಸಿದ್ಧಪಾಠಗಳು ದಾಸ್ತಾನಿನಲ್ಲಿ ಲಭ್ಯವಿಲ್ಲದಿರುವುದರಿಂದ ಇವುಗಳನ್ನು ನೂತನವಾಗಿ ಮುದ್ರಿಸಿ ಸರಬರಾಜು ಮಾಡಿಸಿಕೊಡುವಂತೆ ಮತ್ತು ಸಿದ್ಧಪಾಠಗಳನ್ನು ಕೊಂಡೊಯ್ಯಲು ಬ್ಯಾಗ್‌ಗಳ ಅವಶ್ಯಕತೆ ಇದ್ದು ಇವುಗಳನ್ನು ಸಿದ್ಧಪಡಿಸಿಕೊಡುವಂತೆ ಕೋರಿ ಸಿದ್ಧಪಾಠ ವಿಭಾಗದ ಮುಖ್ಯಸ್ಥರು ಪತ್ರದಲ್ಲಿ ಕೋರಿರುತ್ತಾರೆ. ಈ ಸಂಬಂಧ ಸದರಿ ಸಿದ್ಧಪಾಠಗಳನ್ನು ನೂತನವಾಗಿ ಮುದ್ರಿಸಲು ತಗಲುವ ಅಂದಾಜು ಮೊತ್ತವನ್ನು ಈ ಹಿಂದೆ ಸಿದ್ಧಪಾಠಗಳನ್ನು ಮುದ್ರಿಸಲು ತಗಲುವ ದರದಲ್ಲಿಯೇ ಲೆಕ್ಕಹಾಕಲಾಗಿದ್ದು ಇದಕ್ಕಾಗಿ ರೂ.8.00 ಕೋಟಿಗಳು ವೆಚ್ಚವಾಗಲಿರುತ್ತದೆ ಮತ್ತು ವಿವಿನಿಲಯಕ್ಕೆ ಅಗತ್ಯವಿರುವ ಸುಮಾರು 50,000 ಬ್ಯಾಗ್‌ಗಳಿಗೆ ಒಟ್ಟು ಅಂದಾಜು ಮೊತ್ತ ರೂ.60.00 ಲಕ್ಷಗಳಾಗಿರುತ್ತದೆ. ಈ ಎರಡು ಕೆಲಸಗಳಿಗೆ ಒಟ್ಟಾರೆ ರೂ.8.60 ಕೋಟಿಗಳಾಗಿರುತ್ತದೆ. ಅದ್ದರಿಂದ ಈ ಹಿಂದೆ ವಿವಿನಿಲಯದ ಘನವ್ಯವಸ್ಥಾಪನಾ ಮಂಡಳಿಯ 170ನೇ ಸಾಮಾನ್ಯ ಸಭೆಯಲ್ಲಿ 2022-23ನೇ ಶೈಕ್ಷಣಿಕ ಸಾಲಿನ CBCS ಅಧ್ಯಯನ ಸಾಮಾಗ್ರಿಗಳ ಮುದ್ರಣ ಹಾಗೂ ಕೊರತೆ ಇರುವ ಹಳೆ ಪಠ್ಯಕ್ರಮಗಳ ಸಿದ್ಧಪಾಠಗಳನ್ನು ಮುದ್ರಿಸಲು ತಗಲುವ ಅಂದಾಜು ಮೊತ್ತ ರೂ.10.00 ಕೋಟಿಗಳಿಗೆ ಅನುಮೋದನೆಯನ್ನು ಪಡೆಯಲಾಗಿದ್ದು ಇದರಲ್ಲಿ 4.00 ಕೋಟಿಗಳನ್ನು ಮಾತ್ರ ವೆಚ್ಚ ಮಾಡಲಾಗಿದ್ದು ಪ್ರಸ್ತುತ 2023-24ನೇ ಶೈಕ್ಷಣಿಕ ಸಾಲಿನ ಅಗತ್ಯವಿರುವ ಸಿದ್ಧಪಾಠಗಳನ್ನು ಮುದ್ರಿಸಿ ಸರಬರಾಜು ಮಾಡುವ ಮತ್ತು ಸದರಿ ಅಧ್ಯಯನ ಸಾಮಾಗ್ರಿಗಳನ್ನು ಕೊಂಡ್ಯೊಯಲು ಅಗತ್ಯವಿರುವ ನೆಟ್‌ಲಾನ್ ಬ್ಯಾಗ್‌ಗಳನ್ನು ಸಿದ್ಧಪಡಿಸಲು ಒಟ್ಟಾರೆ ಅಗತ್ಯವಿರುವ ಮೊತ್ತ ರೂ. 8.60 ಕೋಟಿಗಳು ವೆಚ್ಚವಾಗಬಹುದಾದರಿಂದ ಈ ಹಿಂದಿನ 170 ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದನೆಯಾಗಿರುವಂತೆ ರೂ.10.00 ಕೋಟಿ ವೆಚ್ಚದಲ್ಲಿ ಬಾಕಿ ಉಳಿಕೆ ಮೊತ್ತವಾದ ರೂ.6.00 ಕೋಟಿಗಳನ್ನು ಪ್ರಸ್ತುತ ಕೆಲಸಕ್ಕೆ ಬಳಿಸಿಕೊಳ್ಳಬಹುದಾಗಿದ್ದು ಹಾಗೂ ಕೊರತೆ ಇರುವ 2.60 ಕೋಟಿಗಳನ್ನು ವಿವಿನಿಲಯದಿಂದ ಪಾವತಿಸುವ ಸಂಬಂಧ ಮತ್ತು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಸಿದ್ಧಪಾಠಗಳನ್ನು ತುರ್ತಾಗಿ ಒದಗಿಸಿ ಬೇಕಾಗಿರುವುದರಿಂದ ಸದರಿ ಸಿದ್ಧಪಾಠಗಳನ್ನು ಮುದ್ರಿಸಲು ಈಗಾಗಲೇ ಹಿಂದಿನ 170ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದನೆಯಾಗಿರುವಂತೆ ಕ್ರಮವಹಿಸಿ Govt E-market place (Gem)ನ ಮೂಲಕ ಕ್ರಮವಹಿಸಿದ್ದು ಸದರಿ ಸಿದ್ಧಪಾಠಗಳ ಮುದ್ರಣಕ್ಕೆ ಸಂಬಂಧಿಸಿದಂತೆ ವೆಚ್ಚವಾಗಬಹುದಾದ ರೂ.8.60 ಕೋಟಿಗಳಲ್ಲಿ 6.00 ಕೋಟಿಗಳು ಹಿಂದಿನ ಯೋಜನೆಯಲ್ಲಿ ಬಾಕಿ ಉಳಿದಿದ್ದು ಉಳಿಕೆ 2.60 ಕೋಟಿ ಮೊತ್ತವನ್ನು Reappropriate ಮೂಲಕ ವಿವಿನಿಲಯದಿಂದ ಪಾವತಿಸುವ ಬಗೆಗಿನ ವಿಷಯವನ್ನು ಘನವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

******

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ವಿ.ವಿ. ನಿಲಯದ 2023-24ನೇ ಸಾಲಿನ ಸಿದ್ಧಪಾಠಗಳನ್ನು Govt E-market place (Gem)ನ ಮೂಲಕ ಕ್ರಮವಹಿಸಿ ಮುದ್ರಿಸಲು ಅಗತ್ಯವಿರುವ ಹೆಚ್ಚುವರಿ ಮೊತ್ತ ರೂ. 2.60 ಕೋಟಿ ಮೊತ್ತವನ್ನು Reappropriate ಮೂಲಕ ವಿ.ವಿ ನಿಲಯದಿಂದ ಪಾವತಿಸಲು ಸಭೆಯು ಒಪ್ಪಿತು.**

*******

ಕುಲಪತಿಗಳು

ಕುಲಸಚಿವರು

**ವಿಷಯ ಸಂಖ್ಯೆ: 173.16**

ವಿಷಯ: ಕರಾಮುವಿ ನಿಲಯಕ್ಕೆ ಅತ್ಯಂತ ಅಗತ್ಯವಿರುವ ನೂತನ ಮಾದರಿಯ ಒಂದು ಸಂಖ್ಯೆಯ ವಾಹನ ಮತ್ತು ಒಂದು ಸಂಖ್ಯೆಯ ಟ್ರಾಕ್ಟರ್ ಖರೀದಿಸುವ ಬಗ್ಗೆ.

*******

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳಾದ ಡೀನ್(ಶೈಕ್ಷಣಿಕ)ರವರ ಕಛೇರಿ ಕಾರ್ಯ ನಿರ್ವಹಣೆಗಾಗಿ ವಿವಿನಿಲಯದಿಂದ ಮಹೀಂದ್ರಾ ವೆರಿಟೋ ವಾಹನವನ್ನು ಒದಗಿಸಲಾಗಿದ್ದು ಸದರಿ ವಾಹನವು ಸರಿಸುಮಾರು ೧೨ ವರ್ಷ ಹಳೆಯ ವಾಹನವಾಗಿದ್ದು ಯಾವುದೇ ಸಂಧರ್ಭದಲ್ಲಿ ರಿಪೇರಿಗೆ ಬಂದು ನಿಲ್ಲುವ ಸಂಭವವಿರುವುದರಿಂದ ಸುಸಜ್ಜಿತವಾದ ನೂತನ ಮಾದರಿಯ ಒಂದು ವಾಹನವನ್ನು ಒದಗಿಸುವಂತೆ ಡೀನ್(ಶೈಕ್ಷಣಿಕ)ರವರು ಪತ್ರದ ಮೂಲಕ ದಿನಾಂಕ: 25.07.2023 ರಂದು ಕೋರಿರುತ್ತಾರೆ. ಹಾಗೂ ವಿವಿನಿಲಯದ ಮುಕ್ತ ಗಂಗೋತ್ರಿ ಅವರಣದಲ್ಲಿರುವ ಅನುಪಯುಕ್ತ ತ್ಯಾಜ್ಯಗಳನ್ನು ತೆರವುಗೊಳಿಸಲು ವಿವಿನಿಲಯಕ್ಕೆ ಒಂದು ಸಂಖ್ಯೆಯ ಸಣ್ಣ ಟ್ರಾಕ್ಟರ್ ಸಹ ಅತ್ಯಂತ ಅಗತ್ಯವಿರುತ್ತದೆ.

ಆದ್ದರಿಂದ ವಿವಿನಿಲಯಕ್ಕೆ ಅತ್ಯಂತ ಅಗತ್ಯವಿರುವ ನೂತನ ಮಾದರಿಯ ಒಂದು ಸಂಖ್ಯೆಯ ಕಾರನ್ನು ಮತ್ತು ಒಂದು ಸಂಖ್ಯೆಯ ಟ್ರಾಕ್ಟರ್ ಖರೀದಿಸುವ ಬಗ್ಗೆ ಸದರಿ ವಿಷಯವನ್ನು ಘನ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ

*******

ಕುಲಸಚಿವರು ಮಾತನಾಡಿ, ಕರಾಮುವಿ ಶಾಸನಬದ್ಧ ಅಧಿಕಾರಿಗಳಾದ ಡೀನ್(ಶೈಕ್ಷಣಿಕ)ರವರ ಕಛೇರಿ ಕಾರ್ಯ ನಿರ್ವಹಣೆಗಾಗಿ ವಿವಿನಿಲಯದಿಂದ ಮಹೀಂದ್ರಾ ವೆರಿಟೋ ವಾಹನವನ್ನು ಒದಗಿಸಲಾಗಿದ್ದು ಸದರಿ ವಾಹನವು ಹಳೆಯದಾಗಿದ್ದು ರಿಪೇರಿಗೆ ಬಂದು ನಿಲ್ಲುವ ಸಂಭವವಿರುವ ಬಗ್ಗೆ ಹಾಗೂ ವಿ.ವಿ. ನಿಲಯದ ಆವರಣದಲ್ಲಿರುವ ಅನುಪಯುಕ್ತ ತ್ಯಾಜ್ಯಗಳನ್ನು ತೆರವುಗೊಳಿಸಲು ನೂತನ ಮಾದರಿಯ ಒಂದು ಸಂಖ್ಯೆಯ ಕಾರನ್ನು ಮತ್ತು ಒಂದು ಸಂಖ್ಯೆಯ ಟ್ರಾಕ್ಟರ್ ಖರೀದಿಸಲು ಅಗತ್ಯವಿರುತ್ತದೆ ಎಂದು ತಿಳಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ವಿ.ವಿ.ನಿಲಯಕ್ಕೆ ವಾಹನ ಖರೀದಿ ಸಂಬಂಧ ವಿ.ವಿ. ಯು ಮುಂಚಿತವಾಗಿ ಸರ್ಕಾರಕ್ಕೆ ವಿಷಯವನ್ನು ತಿಳಿಸಿ, ಸರ್ಕಾರದ ಅನುಮೋದನೆಯನ್ನು ಪಡೆದುಕೊಳ್ಳಬೇಕಾಗಿದ್ದು, ನಂತರ ನಿಯಮಾನುಸಾರ ಸರ್ಕಾರಿ ಸ್ವಾಮ್ಯದ Gem Portal ಮುಖಾಂತರ ಖರೀದಿಸುವಂತೆ ತಿಳಿಸಿ, ಇಲ್ಲವಾದ್ದಲ್ಲಿ ಆಡಿಟ್ ಆಕ್ಷೇಪಣೆಯಾಗುವ ಸಾಧ್ಯತೆಗಳಿವೆ ಎಂದು ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದರು.

*******

ತೀರ್ಮಾನ :

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಕರಾಮುವಿ ನಿಲಯಕ್ಕೆ ಕಾರು ಹಾಗೂ ಟ್ರಾಕ್ಟರ್ ಖರೀದಿ ಸಂಬಂಧ ನಿಯಮಾನುಸಾರ ಸರ್ಕಾರಿ ಸ್ವಾಮ್ಯದ Gem Portal ಮುಖಾಂತರ ಖರೀದಿಸಲು ಸಭೆಯು ಒಪ್ಪಿತು.**

*******

ಕುಲಪತಿಗಳು

ಕುಲಸಚಿವರು

ವಿಷಯ ಸಂಖ್ಯೆ: 173.17

ವಿಷಯ: ವೃತ್ತಿ ಪದೋನ್ನತಿ ಯೋಜನೆಯಡಿ ನಡೆಸಲಾದ Screenign-Cum-Evaluation and Selection Committee ಸಭೆಯ ನಡಾವಳಿಯ ಬಗೆಗೆ.

*******

ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ ವಿವಿಧ ಹಂತಗಳಿಗೆ ಪದೋನ್ನತಿ ನೀಡುವ ಸಂಬಂಧ ದಿನಾಂಕ: 25.07.2023 ಮತ್ತು 26.07.2023ರಂದು Screenign-Cum-Evaluation and Selection Committee ಸಭೆಗಳನ್ನು ನಡೆಸಲಾಗಿದ್ದು, ಸದರಿ ಸಮಿತಿಯಲ್ಲಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿರುತ್ತದೆ:

Assistant Professors who applied for promotion from Academic Level-10 to Academic Level-11 (AGP 6000 to 7000)

| Sl. No | Name of the Assistant Professor | Subject | Eligibility Date as per Proceedings |
|---|---|---|---|
| 01 | Dr. R. Shranamma | Education | 10.05.2017 |
| 02 | Dr. R. Nagendrakumar | Education | 10.05.2017 |
| 03 | Dr. Shailaja P. Shanbag | Education | 10.05.2017 |
| 04 | Dr. M. Janaki | Education | 10.05.2017 |
| 05 | Dr. N. Krishnappa | Education | 10.05.2017 |

Assistant Professors who applied for promotion from Academic Level-11 to Academic Level-12 (AGP 7000 to 8000)

| Sl. No | Name of the Assistant Professor | Subject | Date of Promotion Academic Level 10 to 11 | Eligibility Date as per Proceedings |
|---|---|---|---|---|
| 01 | Dr. Shivakumaraswamy | Economics | 07.12.2016 | 07.12.2021 |
| 02 | Dr. T.P. Shashikumar | Economics | 06.12.2016 | 06.12.2021 |
| 03 | Dr. V.M. Ramesh | History | 10.12.2016 | 10.12.2021 |
| 04 | Dr. V. Mahesh | Commerce | 06.12.2016 | 06.12.2021 |
| 05 | Dr. R. Chaya | Commerce | 06.12.2016 | 06.12.2021 |
| 06 | Dr. N.R.Chandregowda | Kannada | 05.12.2016 | 05.12.2021 |
| 07 | Dr. P. Mani | Kannada | 05.12.2016 | 05.12.2021 |
| 08 | Dr. N. Anandagowda | Political Science | 05.12.2016 | 05.12.2021 |
| 09 | Dr. M.S. Hemalatha | Food science & Nutrition | 10.12.2016 | 10.12.2021 |
| 10 | Dr. Nataraj .G | English | 23.02.2017 | 23.02.2022 |
| 11 | Dr. H. Rajeshwari | Management | 05.12.2016 | 05.12.2021 |
| 12 | Dr. Savitha P | Management | 28.12.2017 | 28.12.2022 |
| 13 | Dr. Nataraju Angaswamy | Biochemistry | 11.02.2017 | 11.02.2022 |
| 14 | Dr. Niranjan Raj .S | Microbiology | 06.12.2016 | 06.12.2021 |
| 15 | Dr. N.G. Raju | Biotechnology | 06.12.2016 | 06.12.2021 |
| 16 | Dr. Umashankara .M | Chemistry | 06.12.2016 | 06.12.2021 |
| 17 | Dr. J.S. Chandrashekar | Environmental Science | 06.12.2016 | 06.12.2021 |
| 18 | Dr. D. Prabhusena | Hindi | 05.12.2016 | 05.12.2021 |
| 19 | Dr. Mahadevaswamy | Psychology | 30.12.2017 | 30.12.2022 |
| 20 | Dr. Surma | Psychology | 05.12.2018 | 18.03.2022 |
| 21 | Dr. Shalva Pille Iyengar | Ancient History and Archaeology | 31.10.2011 | 31.10.2016 |

ಕುಲಪತಿಗಳು

ಕುಲಸಚಿವರು

Assistant Librarian who applied for promotion from Academic Level-11 to Academic Level-12(AGP 7000 to 8000)

| Sl. No | Name of the Assistant Librarian | Subject | Date of Promotion Academic Level 10 to 11 | Eligibility Date as per Proceedings |
|---|---|---|---|---|
| 01 | Dr. V. Sheela | Assistant Librarian | 29.11.2012 | 19.08.2018 |

Assistant Professors who applied for promotion from Academic Level-12 to Academic Level-13A (Associate Professor) (AGP 8000 to 9000)

| Sl. No | Name of the Assistant Professor | Subject | Date of Promotion Academic Level 11 to 12 | Eligibility Date as per Proceedings |
|---|---|---|---|---|
| 01 | Dr. R. H. Pavithra | Economics | 16.03.2018 | 16.03.2021 |
| 02 | Dr. H.R. Jayapal | Sociology | 13.03.2017 | 18.03.2020 |
| 03 | Smt. Suneetha | Computer Science | 15.07.2017 | 15.07.2020 |

Associate Professor who applied for promotion from Academic Level-13A to Academic Level-14 (Professor , AGP 9000 to 10000)

| Sl. No | Name of the Associate Professor | Subject | Date of Previous Promotion | Eligibility Date as per Proceedings |
|---|---|---|---|---|
| 01 | Dr. T.M. Geethanjali | Kannada | 18.09.2014 | 19.09.2017 |

Deputy Librarian who applied for promotion from Academic Level-13A to Academic Level-14 ( AGP 9000 to 10000)

| Sl. No | Name of the Deputy Librarian | Subject | Date of Previous Promotion | Eligibility Date as per Proceedings | Remarks |
|---|---|---|---|---|---|
| 01 | Dr. M. Gopalaswamy | Deputy Librarian | DOA 2007 | 07.09.2018 | The Candidate is eligible for Placement to Deputy Librarian with Academic Level 13A to 14 |

ವೃತ್ತಿ ಪದೋನ್ನತಿ ಯೋಜನೆಯಡಿ (CAS) ಪದೋನ್ನತಿಗೆ ಸಂಬಂಧಿಸಿದಂತೆ, ಮೇಲ್ಕಂಡ Screening-Cum-Evaluation and Selection Committee ಸಭೆಗಳ ಶಿಫಾರಸ್ಸನ್ನು ಹಾಗೂ ಸದರಿ ಸಭೆಯಲ್ಲಿ ನಮೂದಿಸಲಾದ ಅರ್ಹತಾ ದಿನಾಂಕವನ್ನು ಪರಿಗಣಿಸಿ ಅಧ್ಯಾಪಕರು ಹಾಗೂ ತತ್ಸಮಾನ ವೃಂದದವರಿಗೆ ಮುಂದಿನ ಹಂತದ ಪದೋನ್ನತಿಗೆ ಪರಿಗಣಿಸುವ ಸಂಬಂಧ ನೇಮಕಾತಿ ಪ್ರಾಧಿಕಾರವಾದ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*******

ಕುಲಪತಿಗಳು

ಕುಲಸಚಿವರು

ತೀರ್ಮಾನ :

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ವೃತ್ತಿ ಪದೋನ್ನತಿ ಯೋಜನೆಯಡಿ (CAS) ಪದೋನ್ನತಿಗೆ ಸಂಬಂಧಿಸಿದಂತೆ, **Screening-Cum-Evaluation and Selection Committee** ಸಭೆಗಳ ಶಿಫಾರಸ್ಸನ್ನು ಹಾಗೂ ಸದರಿ ಸಭೆಯಲ್ಲಿ ನಮೂದಿಸಲಾದ ಅರ್ಹತಾ ದಿನಾಂಕವನ್ನು ಪರಿಗಣಿಸಿ ಅಧ್ಯಾಪಕರು ಹಾಗೂ ತತ್ಸಮಾನ ವೃಂದದವರಿಗೆ ಮುಂದಿನ ಹಂತದ ಪದೋನ್ನತಿಗೆ ಪರಿಗಣಿಸುವ ಸಂಬಂಧ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

ತದನಂತರ, ಸಭೆಯಲ್ಲಿ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಕಾರ್ಯಕ್ರಮದ ಬಗ್ಗೆ ವಿಸ್ತೃತವಾಗಿ ಚರ್ಚಿಸಲಾಗಿ, ವಿ.ವಿ.ನಿಲಯಕ್ಕೆ ವಿವಿಧ ಕೋರ್ಸ್‌ಗಳನ್ನು ಒ.ಡಿ.ಎಲ್ ಮತ್ತು ಆನ್-ಲೈನ್ ಮುಖಾಂತರ ಪ್ರಾರಂಭಿಸಲು ಯು.ಜಿ.ಸಿ. ವತಿಯಿಂದ ಅನುಮೋದನೆ ದೊರೆತಿರುವ ಹಿನ್ನೆಲೆಯಲ್ಲಿ ಸದರಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಯು.ಜಿ.ಸಿ ನಿಯಮದನ್ವಯ ಅಗತ್ಯ ಅಧ್ಯಾಪಕರ ವೃಂದದವರನ್ನು ತಾತ್ಕಾಲಿಕವಾಗಿ ಸಹಾಯಕ ಪ್ರಾಧ್ಯಾಪಕ (ಗುತ್ತಿಗೆ ಆಧಾರ) ನೇಮಕ ಮಾಡಿಕೊಳ್ಳಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

*******

**ವಿಷಯ ಸಂಖ್ಯೆ: 170.18**

ವಿಷಯ: ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ Data Centre ನ Storage Upgrade ಮಾಡುವ ಬಗೆಗೆ.

*****

ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಸಂಪೂರ್ಣ ಮಾಹಿತಿ, ಪರೀಕ್ಷಾ ಪ್ರಕ್ರಿಯೆ, ಫಲಿತಾಂಶ ಪ್ರಕಟಣೆ, ಕೋಡಿಂಗ್, ಡಿ–ಕೋಡಿಂಗ್, ಪ್ರವೇಶಾತಿ, ಪ್ರವೇಶ ಪತ್ರ ನೀಡುವುದು ಎಲ್ಲಾ ರೀತಿಯ ಶುಲ್ಕ ಪಾವತಿ, ಹಳೆಯ ವಿದ್ಯಾರ್ಥಿಗಳ ಮಾಹಿತಿಗಳ ಹಾಗೂ ಮುಂತಾದ ಅಂಕಿ-ಅಂಶಗಳು ಮಾಹಿತಿಗಳ ಡಿಜಟಲೀಕರಣಗೊಳಿಸಿ ಗೌಪ್ಯತೆಯನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ವಿವಿ ನಿಲಯದಲ್ಲಿ ದತ್ತಾಂಶ ಶೇಖರಣೆ (In-house Data Centre) ಕೇಂದ್ರವನ್ನು ಸ್ಥಾಪಿಸುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಯ ವಿಷಯ ಸಂಖ್ಯೆ: 160.14 ಹಾಗೂ 165.08 ತೀರ್ಮಾನದಂತೆ ರೂ.3,90,00,000/– (ಮೂರು ಕೋಟಿ ತೊಂಬತ್ತು ಲಕ್ಷ ರೂಪಾಯಿಗಳು ಮಾತ್ರ, ಎಲ್ಲಾ ತೆರಿಗೆಗಳು ಸೇರಿ) ಗಳಲ್ಲಿ ಸರಬರಾಜು ಮಾಡಿ ಅಳವಡಿಸಲು M/s. Cadmaxx Solutions Pvt., Ltd., ರವರಿಗೆ ಕಾರ್ಯಾದೇಶ ನೀಡಿ ಒಡಂಬಡಿಕೆ ಮಾಡಿಕೊಂಡು Data Centre ಸ್ಥಾಪಿಸಲಾಗಿರುತ್ತದೆ.

ಮುಂದುವರೆದು, ವಿವಿಯ ಪರೀಕ್ಷಾ ವಿಭಾಗದ ಮೌಲ್ಯಮಾಪನಾ ಕಾರ್ಯವನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸುವ ಸಂಬಂಧ Digital Evaluation ಕಾರ್ಯ ಪ್ರಾರಂಭಿಸಿದ್ದು ಸದರಿ ಕಾರ್ಯದಲ್ಲಿ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ Scanned copies, A forms, Evaluation scripts ಗಳನ್ನು store ಮಾಡಲು ಹಾಗೂ ವಿವಿಯ ದೃಶ್ಯ ಸ್ಟುಡಿಯೋ ವಿಭಾಗದಿಂದ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ಚಿತ್ರೀಕರಿಸಿರುವ ವಿಡಿಯೋಗಳನ್ನು store ಮಾಡಲು ಪ್ರಸ್ತುತ Data Centre ನಲ್ಲಿ ಲಭ್ಯವಿರುವ 10TB Storage ಕಡಿಮೆಯಾಗಿರುವ ಹಿನ್ನೆಲೆಯಲ್ಲಿ Data Centre Storage Enhance ಮಾಡುವ ಸಂಬಂಧ ದಿನಾಂಕ: 24.07.2023 ರಂದು Technical Experts Committee ಸಭೆ ನಡೆದು, ಸದರಿ ಸಭೆಯಲ್ಲಿ ಸಮಿತಿಯು ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತದೆ:

ಕುಲಪತಿಗಳು ಕುಲಸಚಿವರು

Considering the need for enhancing storage, the Committee by consensus recommended to procure the below for Data Centre:

| Sl. No. | Description | Quantity |
|---|---|---|
| 01 | 200 TB usable SAN storage. | 01 |
| 02 | 50TB SAN storage for File transfer. | 01 |
| 03 | Existing usable 10TB storage to be upgraded for 50TB and moved as a backup device. | 01 |
| 04 | Upgrading the existing CISCO SAN switches to additional 8 port | 01 |
| 05 | Backup software at the Data Centre | 01 |
| 06 | Provisioning of water leakage detectors | 01 |
| 07 | Provisioning of rodent repellent system | 01 |
| 08 | Migration of existing 8TB data to new 200TB storage device | 01 |

ಸದರಿ ಉಪಕರಣ/ತಂತ್ರಾಂಶಗಳನ್ನು ಖರೀದಿಸಿ ಅಳವಡಿಸುವ ಸಂಬಂಧ ಅಂದಾಜು ವೆಚ್ಚ ರೂ. 5,00,00,000/– (ಐದು ಕೋಟಿ ರೂಪಾಯಿಗಳು ಮಾತ್ರ, ಎಲ್ಲಾ ತೆರಿಗೆಗಳು ಸೇರಿ) ಗಳಷ್ಟಿದ್ದು, ಖರೀದಿ ಪ್ರಕ್ರಿಯೆ ಬಗ್ಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*******

<u>ತೀರ್ಮಾನ :</u>

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ Data Centre ನ 10TB Storage ಕಡಿಮೆಯಾಗಿರುವ ಹಿನ್ನೆಲೆಯಲ್ಲಿ Data Centre Storage Enhance ಮಾಡುವ ಸಂಬಂಧ Technical Experts Committee ಸಭೆಯ ಶಿಫಾರಸ್ಸಿನನ್ವಯ ಪ್ರಸ್ತಾಪಿಸಿರುವ ಉಪಕರಣ/ತಂತ್ರಾಂಶಗಳನ್ನು ಖರೀದಿಸಿ GEM Portal/ Public Procurement Portal ರ ಮುಖಾಂತರ ಅಳವಡಿಸಲು ಸಭೆಯು ಒಪ್ಪಿತು.**

*******

**ವಿಷಯ ಸಂಖ್ಯೆ: 173.19**

ವಿಷಯ: ವಿಶ್ವವಿದ್ಯಾನಿಲಯದಲ್ಲಿ Disaster Recovery Centre ಸ್ಥಾಪಿಸುವ ಕುರಿತು.

*******

ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ Data Centre ನಲ್ಲಿ host ಮಾಡಲಾದ Applications ಗಳನ್ನು Mirror ಮಾಡಿ ಸಂಗ್ರಹವಾಗಿರುವ ಡೇಟಾವನ್ನು ರಕ್ಷಿಸಿ, ಭದ್ರಪಡಿಸುವ ದೃಷ್ಟಿಯಿಂದ ಹಾಗೂ ತಾಂತ್ರಿಕ ಕಾರಣಗಳಿಂದ Data Centre downtime ಆದ ಸಂದರ್ಭಗಳಲ್ಲಿ Applications ಗಳನ್ನು Live ಮಾಡಲು ಅವಶ್ಯವಿರುವ Disaster Recovery Centre ಅನ್ನು ಸ್ಥಾಪಿಸುವ ಸಂಬಂಧ ದಿನಾಂಕ: 24.07.2023 ರಂದು Technical Experts Committee ಸಭೆ ನಡೆದು, ಸದರಿ ಸಭೆಯಲ್ಲಿ ಸಮಿತಿಯು ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತದೆ:

ಕುಲಪತಿಗಳು                                                                                                    ಕುಲಸಚಿವರು.

The Committee by consensus recommended to establish the Disaster Recovery Centre either at KSOU Vijayanagar Centre, Mysuru or at KSOU Regional Centre, Mandya with below mentioned equipments

| Sl. No. | Description | Quantity |
|---|---|---|
| 01 | Supply installation and commissioning of 48 1/10GbE SFP+/RJ-45 ports, 6 10/40GbE QSFP+ ports, one modular slot. Base layer 3 software advanced L3 features. Power supplies, fans | 01 |
| 02 | SAN Storage with Usable 200TB Capacity | 01 |
| 03 | 16 Port SAN Switch at DRC with required accessories | 02 |
| 04 | Security Firewall | 01 |
| 05 | Application Server<br>Intel Xeon Gold 6330 2.0GHz Processor, 128GB Memory | 02 |
| 06 | Smart Rack System- 42 U | 01 |
| 07 | 10KVA UPS 1+1 | 02 |
| 08 | Water Leakage Detectors and Rodent Repellent System | 01 |
| 09 | Provisioning of SD WAN Connectivity between DC and DRC with 100Mbps 1:1 Internet Bandwidth for one year | 01 |
| 10 | Backup Software App to push data from Data Centre to Disaster Recovery Centre and Data Migration software | 01 |
| 11 | VMware vSphere Standard | 02 License |

Disaster Recovery Centre ಸ್ಥಾಪಿಸಲು ಅಂದಾಜು ವೆಚ್ಚ ರೂ. 5,00,00,000/– (ಐದು ಕೋಟಿ ರೂಪಾಯಿಗಳು ಮಾತ್ರ, ಎಲ್ಲಾ ತೆರಿಗೆಗಳು ಸೇರಿ) ಗಳಷ್ಟಿದ್ದು, ಖರೀದಿ ಪ್ರಕ್ರಿಯೆ ಹಾಗೂ ಸ್ಥಳ ನಿಗದಿ (KSOU Vijayanagar Centre, Mysuru or KSOU Regional Centre, Mandya) ಬಗ್ಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*******

<u>ತೀರ್ಮಾನ :</u>

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ವಿ.ವಿ. ನಿಲಯದ ವಿಜಯನಗರ ಕೇಂದ್ರ ಮೈಸೂರು ಅಥವಾ ಕರಾಮುವಿ ನಿಲಯದ ಮಂಡ್ಯ ಪ್ರಾದೇಶಿಕ ಕೇಂದ್ರದಲ್ಲಿ Technical Experts Committee ಸಭೆಯ ಶಿಫಾರಸ್ಸಿನನ್ವಯ Disaster Recovery Centre ಅನ್ನು ಸ್ಥಾಪಿಸುವ ಸಂಬಂಧ ಖರೀದಿ ಪ್ರಕ್ರಿಯೆಯನ್ನು GEM Portal/ Public Procurement Portal ರ ಮುಖಾಂತರ ಕೈಗೊಳ್ಳಲು ಸಭೆಯು ಒಮ್ಮತದಿಂದ ಒಪ್ಪಿಗೆ ನೀಡಿತು.**

*******

ಕುಲಪತಿಗಳು ಕುಲಸಚಿವರು

ವಿಷಯ ಸಂಖ್ಯೆ: **173.20**

**ವಿಷಯ: ಕರಾಮುವಿ ನಿಲಯದ ವಿಜ್ಞಾನ ಭವನದ ಕಟ್ಟಡವನ್ನು ವಿಸ್ತರಿಸುವ ಬಗ್ಗೆ.**

*******

ಕರಾಮುವಿ 2018-19 ನೇ ಸಾಲಿನ ನಂತರದಿಂದ ವಿಜ್ಞಾನ ವಿಷಯಗಳ BSC ಹಾಗೂ MSC ಕೋರ್ಸ್‌ಗಳ ಪ್ರತಿ ವಿಭಾಗಕ್ಕೆ ಪ್ರವೇಶ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಗಣನೀಯವಾಗಿ ಹೆಚ್ಚಾಗುತ್ತಿದ್ದು ಪ್ರಸ್ತುತ ಅನ್ಯ ವಿಶ್ವವಿದ್ಯಾನಿಲಯ/ ಕಾಲೇಜುಗಳಲ್ಲಿ ಪ್ರಯೋಗಾಲಯ ತರಗತಿಗಳನ್ನು ನಡೆಸಲಾಗುತ್ತಿದ್ದು ಇನ್ನು ಮುಂದೆ ಅನಿಯಮಿತವಾಗಿ ಪ್ರಯೋಗಾಲಯ ತರಗತಿಗಳನ್ನು ನಡೆಸಬೇಕಿರುವುದರಿಂದ ಅನ್ಯ ವಿಶ್ವವಿದ್ಯಾನಿಲಯ/ ಕಾಲೇಜುಗಳಲ್ಲಿ ಕಾಲಮಿತಿಯೊಳಗೆ ನೆಡೆಸಲು ಕಷ್ಟವಾಗಲಿದ್ದು, ಪಿಹೆಚ್.ಡಿ ಪದವಿಯ ವಿದ್ಯಾರ್ಥಿಗಳಿಗೆ ಸಂಶೋಧನ ಚಟುವಟಿಕೆಗಳನ್ನು ನೆಡೆಸಲು ಪ್ರತಿದಿನವು ಪ್ರಯೋಗಾಲಯದ ಅವಶ್ಯಕತೆ ಇರುತ್ತದೆ. ಪ್ರಸ್ತುತ 2020-21ನೇ ಸಾಲಿನಲ್ಲಿ ವಿಭಾಗಕ್ಕೆ 11 ಕೋರ್ಸ್‌ಗಳ ಜೊತೆಗೆ ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ವಿಷಯಗಳು ಸೇರ್ಪಡೆಗೊಂಡು, ಭೂ ವಿಜ್ಞಾನ ವಿಷಯವು ಪ್ರಾರಂಭಗೊಳ್ಳುವ ನಿರೀಕ್ಷೆ ಇರುತ್ತದೆ ಹಾಗೂ ಪ್ರತಿ ವಿಭಾಗಕ್ಕೆ ಪ್ರಸ್ತುತ ಒಂದು ಪ್ರಯೋಗಾಲಯ ಸೌಲಭ್ಯವಿದ್ದು ವಾರ್ಷಿಕ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಪ್ರತಿ ವಿಭಾಗಕ್ಕೆ ಹೆಚ್ಚುವರಿಯಾಗಿ ಎರಡರಿಂದ ಮೂರು ಪ್ರಯೋಗಾಲಯದ ಅವಶ್ಯಕವಿರುತ್ತದೆ ಎಂದು ವಿಜ್ಞಾನ ವಿಭಾಗದ ಎಲ್ಲಾ ಮುಖ್ಯಸ್ಥರು ಪತ್ರದ ಮುಖಾಂತರ ಕೋರಿರುತ್ತಾರೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಿಜ್ಞಾನ ವಿಭಾಗದ ಕಟ್ಟಡದಲ್ಲಿ ಪ್ರಸ್ತುತ ನೆಲಮಹಡಿ, ಮೊದಲನೇ ಮತ್ತು ಎರಡನೇ ಮಹಡಿಯ ಕಟ್ಟಡವಿದ್ದು ಹೆಚ್ಚುವರಿಯ ಪ್ರಯೋಗಾಲಯ ನಿರ್ಮಿಸಬೇಕಿದ್ದಲ್ಲಿ ಮೂರನೇ ಮಹಡಿಗೆ ಕಟ್ಟಡವನ್ನು ವಿಸ್ತರಿಸಬೇಕಾಗಿರುತ್ತದೆ.

ಮುಂದುವರೆದು ವಿಜ್ಞಾನ ವಿಭಾಗದ ಕಟ್ಟಡದ ಪ್ರತಿ ಮಹಡಿಯು ಸರಿಸುಮಾರು 2500 ಚ.ಮೀ ವಿಸ್ತೀರ್ಣ ಹೊಂದಿದ್ದು ಹೆಚ್ಚುವರಿಯಾಗಿ ಮೂರನೇ ಮಹಡಿಗೆ ಸರಿಸುಮಾರು 2500 ಚ.ಮೀ ವಿಸ್ತೀರ್ಣದಂತೆ ಕಟ್ಟಡ ನಿರ್ಮಾಣವಾಗಬೇಕಿರುತ್ತದೆ ಹಾಗೂ ಈ ಸಂಬಂಧ ಲೋಕೋಪಯೋಗಿ ಇಲಾಖೆ ದರಸೂಚಿ 2021-22 ರ ಅನ್ವಯ ಕಟ್ಟಡ ಕಾಮಗಾರಿಯನ್ನು ನಿಯಾಮನುಸಾರ e-procurement ಮೂಲಕ ಟೆಂಡರ್ ಅಹ್ವಾನಿಸಿ ನಿರ್ವಹಿಸಲು ಸರಿಸುಮಾರು ರೂ. 1000.00 ಲಕ್ಷಗಳು ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ. ಸದರಿ ವಿಷಯವನ್ನು ಘನ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ

*******

ತೀರ್ಮಾನ :

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ವಿ.ವಿ. ನಿಲಯದ ವಿಜ್ಞಾನ ವಿಭಾಗದ ಕಟ್ಟಡದಲ್ಲಿ ಪ್ರಸ್ತುತ ನೆಲಮಹಡಿ, ಮೊದಲನೇ ಮತ್ತು ಎರಡನೇ ಮಹಡಿಯ ಕಟ್ಟಡವಿದ್ದು, ಹೆಚ್ಚುವರಿಯ ಪ್ರಯೋಗಾಲಯ ನಿರ್ಮಿಸಲು ಮೂರನೇ ಮಹಡಿಗೆ ಕಟ್ಟಡವನ್ನು ವಿಸ್ತರಿಸುವ ಸಂಬಂಧ ಲೋಕೋಪಯೋಗಿ ಇಲಾಖೆ ದರಸೂಚಿ 2021-22 ರ ಅನ್ವಯ ನಿಯಮಾನುಸಾರ Public Procurement Portal ಮೂಲಕ ಟೆಂಡರ್ ಆಹ್ವಾನಿಸಿ ಕಟ್ಟಡ ಕಾಮಗಾರಿಯನ್ನು ನಿರ್ವಹಿಸಲು ಸಭೆಯು ಒಪ್ಪಿತು.**

*******

ಕುಲಪತಿಗಳು

ಕುಲಸಚಿವರು

**ವಿಷಯ ಸಂಖ್ಯೆ :- 173.21**

**ವಿಷಯ:- ವಿವಿನಿಲಯದ ಶಾಸನಬದ್ಧ ಅಧಿಕಾರಿಗಳಿಗೆ ವಸತಿ ಸೌಲಭ್ಯವನ್ನು ಕಲ್ಪಿಸುವ ಬಗ್ಗೆ**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 1994ನೇ ಇಸವಿಯಂದು ಸ್ವತಂತ್ರ ವಿವಿನಿಲಯವಾಗಿ ಸ್ಥಾಪನೆಗೊಂಡಿದ್ದು ವಿವಿನಿಲಯವು ತನ್ನದೇ ಆದ ಕಾಯ್ದೆ ಮತ್ತು ಪರಿನಿಯಮಗಳನ್ನು ರಚಿಸಿಕೊಂಡು ಕಾರ್ಯವನ್ನು ನಿರ್ವಹಿಸುತ್ತಿದೆ.

ಕರಾಮುವಿ ನಿಲಯಕ್ಕೆ ನೇಮಕಗೊಳ್ಳುವಂತಹ ಪರೀಕ್ಷಾ ವಿಭಾಗ, ಆಡಳಿತ ವಿಭಾಗ ಹಾಗೂ ಹಣಕಾಸು ವಿಭಾಗದ ಶಾಸನಬದ್ಧ ಅಧಿಕಾರಿಗಳಿಗೆ ವಸತಿ ಸೌಲಭ್ಯವಿರುವುದಿಲ್ಲ ಅದುದರಿಂದ ವಿವಿನಿಲಯದ ಆವರಣದಲ್ಲಿ ಇಂಜಿನಿಯರಿಂಗ್ ವಿಭಾಗದ ಮುಂಭಾಗದಲ್ಲಿರುವ ಖಾಲಿ ಪ್ರದೇಶದಲ್ಲಿ ವಸತಿ ಸೌಲಭ್ಯಕ್ಕಾಗಿ ಕಟ್ಟಡ ನಿರ್ಮಣ ಮಾಡಿದ್ದಲ್ಲಿ ಶಾಸನಬದ್ಧ ಅಧಿಕಾರಿಗಳಿಗೆ ಅನುಕೂಲವಾಗುವುದರೊಂದಿಗೆ ವಿವಿನಿಲಯದ ಕಾರ್ಯಚಟುವಟಿಕೆಗಳಿಗೆ ಸಹಕಾರಿಯಾಗಿರುತ್ತದೆ. ಈ ಸಂಬಂಧ ನೆಲಹಂತಸ್ತಿನಲ್ಲಿ ಪಾರ್ಕಿಂಗ್ ಸೌಲಭ್ಯ ಹೊದಗಿಸಿ ಮೊದಲನೇ, ಎರಡನೇ, ಮೂರನೇ ಮಹಡಿಯಲ್ಲಿ ಮೂರು ವಿಭಾಗದ ಮುಖ್ಯಸ್ಥರಿಗೆ ಪ್ರತ್ಯೇಕವಾಗಿ ಮೂರು ಕೊಠಡಿಗಳ ವಸತಿ ಸೌಲಭ್ಯ ಕಲ್ಪಿಸಲು ಲೋಕೋಪಯೋಗಿ ಇಲಾಖೆ ದರಸೂಚಿ 2020-21 ರ ಅನ್ವಯ ಸರಿಸುಮಾರು ರೂ. 500.00 ಲಕ್ಷಗಳು ವೆಚ್ಚವಾಗಬಹುದೆಂದು ಅಂದಾಜಿಸಲಾಗಿ, ನಿಯಮಾನುಸಾರ e- procurement ಮೂಲಕ ಟೆಂಡರ್ ಆಹ್ವಾನಿಸಿ ಕೆಲಸವನ್ನು ನಿರ್ವಹಿಸಬಹುದಾಗಿರುತ್ತದೆ. ಸದರಿ ವಿಷಯವನ್ನು ಘನ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

*******

ತೀರ್ಮಾನ :

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಪರೀಕ್ಷಾ ವಿಭಾಗ, ಆಡಳಿತ ವಿಭಾಗ ಹಾಗೂ ಹಣಕಾಸು ವಿಭಾಗದ ಶಾಸನಬದ್ಧ ಅಧಿಕಾರಿಗಳಿಗೆ ವಸತಿ ಕಲ್ಪಿಸುವ ಸಂಬಂಧ ವಿವಿನಿಲಯದ ಆವರಣದಲ್ಲಿ ಇಂಜಿನಿಯರಿಂಗ್ ವಿಭಾಗದ ಮುಂಭಾಗದಲ್ಲಿರುವ ಖಾಲಿ ಪ್ರದೇಶದಲ್ಲಿ ನೆಲಅಂತಸ್ತಿನಲ್ಲಿ ಪಾರ್ಕಿಂಗ್ ಸೌಲಭ್ಯ ಒದಗಿಸಿ ಮೊದಲನೇ, ಎರಡನೇ, ಮೂರನೇ ಮಹಡಿಯಲ್ಲಿ ಮೂರು ವಿಭಾಗದ ಮುಖ್ಯಸ್ಥರಿಗೆ ಪ್ರತ್ಯೇಕವಾಗಿ ಮೂರು ಕೊಠಡಿಗಳ ವಸತಿ ಸೌಲಭ್ಯ ಕಲ್ಪಿಸಲು ಲೋಕೋಪಯೋಗಿ ಇಲಾಖೆ ದರಸೂಚಿ 2020-21 ರ ಅನ್ವಯ Public Procurement Portal ಮೂಲಕ ಟೆಂಡರ್ ಆಹ್ವಾನಿಸಿ ಕಟ್ಟಡವನ್ನು ನಿರ್ಮಿಸಲು ಸಭೆಯು ಒಪ್ಪಿತು.**

*******

ಕುಲಪತಿಗಳು ಕುಲಸಚಿವರು

**ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ವಿಷಯಗಳು:**

1. **ವಿಷಯ:** ಡಾ. ತೇಜಸ್ವಿ ನವಿಲೂರು, ಸಹ ಪ್ರಾಧ್ಯಾಪಕರು, ಪತ್ರಿಕೋದ್ಯುಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ, ಇವರ ಇಲಾಖಾ ವಿಚಾರಣಾ ವರದಿಯ ಬಗೆಗೆ.

******

ಡಾ.ತೇಜಸ್ವಿ ನವಿಲೂರು, ಸಹ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ, ಕರಾಮುವಿ ಇವರಿಗೆ ಸಂಖ್ಯೆ: ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–1/626/2022–23, ದಿನಾಂಕ: 30.04.2022 ರನ್ವಯ "ಷೋಕಾಸ್ ನೋಟಿಸ್" ಜಾರಿಮಾಡಲಾಗಿದ್ದು ಸದರಿ ಅಧ್ಯಾಪಕರು **"ಷೋಕಾಸ್ ನೋಟಿಸ್"** ಗೆ ತಮ್ಮ ಲಿಖಿತ ವಿವರಣೆಯನ್ನು ದಿನಾಂಕ: 18.05.2022 ರಂದು ಸಲ್ಲಿಸಿರುತ್ತಾರೆ, ಸದರಿ ವಿವರಣೆಯನ್ನು ವಿಶ್ವವಿದ್ಯಾನಿಲಯದ ಆಡಳಿತ ವರ್ಗವು ಒಪ್ಪಿರುವುದಿಲ್ಲ ಹಾಗೂ

ಸದರಿ ವಿಷಯದ ಸತ್ಯಾಸತ್ಯತೆಯನ್ನು ಅರಿಯುವ ದೃಷ್ಟಿಯಿಂದ ಇಲಾಖಾ ವಿಚಾರಣೆ ನಡೆಸಲು ಆದೇಶಿಸಲಾಗಿರುತ್ತದೆ.

ಈ ಸಂಬಂಧ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿವಿ ಉದ್ಯೋಗಿಗಳ ಸಿ.ಸಿ.ಎ ಪರಿನಿಯಮದ ನಿಯಮ 9 ಮತ್ತು 10 ರಲ್ಲಿನ ಅನುಬಂಧ 01 ರಿಂದ 04 ರವರೆಗೆ ದೋಷಾರೋಪಣೆ, ದೋಷಾರೋಪಣೆಗೆ ವಿವರಣೆಗಳು, ದಾಖಲಾತಿ ಪಟ್ಟಿ ಹಾಗೂ ಸಾಕ್ಷಿಗಳ ವಿವರಗಳೊಂದಿಗೆ ಲಿಖಿತ ಹೇಳಿಕೆಯನ್ನು ನಿಗಧಿತ ಅವಧಿಯೊಳಗೆ ಸಲ್ಲಿಸುವಂತೆ ಈ ಕೆಳಕಂಡಂತೆ ಆರೋಪ ಮಾಡಿ ವಿವರಣೆಯನ್ನು ಸಲ್ಲಿಸುವಂತೆ ದಿನಾಂಕ: 10.06.2022 ರ ಪತ್ರದ ಮೂಲಕ ತಿಳಿಸಲಾಗಿತ್ತು.

ಡಾ.ತೇಜಸ್ವಿ ನವಿಲೂರು, ಸಹ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ ಇವರು ದಿನಾಂಕ: 28.12.2013 ರಿಂದ 16.12.2021 ರವರೆಗೆ ವಿಭಾಗದ ಅಧ್ಯಕ್ಷರಾಗಿ ಹಾಗೂ ದಿನಾಂಕ: 08.02.2019 ರಿಂದ 07.02.2022 ರವರೆಗೆ ಸ್ನಾತಕೋತರ ಅಧ್ಯಯನ ಮಂಡಳಿ ಅಧ್ಯಕ್ಷರಾಗಿ ಕಾರ್ಯಾ ನಿರ್ವಹಿಸಿದ್ದು, ಈ ಅವಧಿಯಲ್ಲಿ CBCS ಪಠ್ಯಕ್ರಮ ರಚಿಸುವ ಸಂಬಂಧ ಯಾವುದೇ ಸಭೆ ನಡೆಸಿರುವುದಿಲ್ಲ ಎಂಬ **ಆರೋಪ–1.**

CBCS ಸಿದ್ದಪಾಠಗಳನ್ನು ರಚಿಸುವ ಸಂಬಂಧ ವಿವಿಧ ದಿನಾಂಕಗಳಂದು ನಡೆಸಲಾದ ಸಭೆಗಳಿಗೆ ಅಧ್ಯಕ್ಷಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ ಮತ್ತು ಸ್ನಾತಕೋತರ ಅಧ್ಯಯನ ಮಂಡಳಿ ಅಧ್ಯಕ್ಷರಾಗಿಯೂ ಸಭೆಗಳಿಗೆ ಗೈರಾದ ಸಂಬಂಧ ಹಾಗೂ ಸಿದ್ದಪಾಠಗಳನ್ನು ರಚಿಸಿ ಸಕಾಲದಲ್ಲಿ ಸಲ್ಲಿಸುವಲ್ಲಿ ವಿಳಂಬ ನೀತಿಯನ್ನು ಅನುಸರಿಸುತ್ತಿರುವ ಸಂಬಂಧವಾಗಿ ಮಾಡಲಾದ **ಆರೋಪ–2.**

**ಕುಲಪತಿಗಳು** **ಕುಲಸಚಿವರು**

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ, ಸ್ನಾತಕೋತರ ಅಧ್ಯಯನ ಮಂಡಳಿ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುವ ಅವಧಿಯಲ್ಲಿ ಸಿದ್ದಪಾಠಗಳನ್ನು ರಚಿಸುವಲ್ಲಿ ಯವುದೇ ಕ್ರಮವಹಿಸದಿರುವುದರಿಂದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗಕ್ಕೆ ಹಾಗೂ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ತೊಂದರೆಯಾಗಿರುತ್ತದೆ ಎಂಬ **ಆರೋಪ–3.**

ಜವಾಬ್ದಾರಿಯುತ ಅಧಿಕಾರದ ಹುದ್ದೆಯಲ್ಲಿದ್ದು, ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದಿರುವುದು ಕರ್ತವ್ಯ ಲೋಪವಾಗಿದ್ದು, ಇದು ವಿ.ವಿ ಯ ಆಡಳಿತ ಕಾರ್ಯವೈಖರಿಗೆ ವಿರುದ್ದವಾಗಿದ್ದು, ಈ ನಡವಳಿಕೆಯು ವಿವಿ ಅಧಿಕಾರಿಗಳಿಗೆ ತಕ್ಕದಲ್ಲವಾಗಿರುತ್ತದೆ ಎಂಬ **ಆರೋಪ–4.**

ಈ ಸಂಬಂಧ ಸದರಿ ಸಹ ಪ್ರಾಧ್ಯಾಪಕರು ದಿನಾಂಕ: 25.06.2022 ರಂದು ಸಲ್ಲಿಸಿದ್ದ ಲಿಖಿತ ಸಮಜಾಯಿಷಿಯನ್ನು ವಿಶ್ವವಿದ್ಯಾನಿಲಯವು ಅಂಗೀಕರಿಸಿದೆ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿವಿ ಉದ್ಯೋಗಿಗಳ ಸಿ.ಸಿ.ಎ ಪರಿನಿಯಮದನ್ವಯ ಶ್ರೀ ಗೋಪಾಲ್ ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಶ್ವವಿದ್ಯಾನಿಲಯವು ಮಾಡಲಾದ ಅರೋಪದ ಸತ್ಯಾಸತ್ಯತೆಯನ್ನು ಅರಿಯುವ ದೃಷ್ಟಿಯಿಂದ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–1/626/2022–23, ದಿನಾಂಕ: 25.07.2022 ರನ್ವಯ ವಿಚಾರಣಾಧಿಕಾರಿಯಾಗಿ ನೇಮಕ ಮಾಡಿ, ವಿಚಾರಣಾ ವರದಿಯನ್ನು ದಾಖಲಾತಿಗಳೊಂದಿಗೆ ಸಲ್ಲಿಸಲು ತಿಳಿಸಿ ಆದೇಶಿಸಲಾಗಿತ್ತು.

ಶ್ರೀ ಗೋಪಾಲ್ ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರು ವಿಚಾರಣಾ ಸಂಖ್ಯೆ: 01/2022 ರಂತೆ ದಿನಾಂಕ 09.09.2022 ರಿಂದ ವಿಚಾರಣೆಯನ್ನು ಪ್ರಾರಂಭಿಸಿ, ವಿವಿಧ ದಿನಾಂಕಗಳಂದು ವಿಚಾರಣೆ ನಡೆಸಿ, ಅಂತಿಮ ವಿಚಾರಣೆಯನ್ನು ದಿನಾಂಕ: 15.04.2023ರಂದು ನಡೆಸಿ, ದಿನಾಂಕ: 14.07.2023 ರಂದು ವಿಚಾರಣಾ ವರದಿಯನ್ನು ಮಾನ್ಯ ಕುಲಪತಿಗಳಿಗೆ ಸಲ್ಲಿಸಿರುತ್ತಾರೆ. ಸದರಿ ವಿಚಾರಣಾ ವರದಿಯು ಅಂತಿಮ ಆದೇಶ ಈ ಕೆಳಕಂಡಂತಿರುತ್ತದೆ.

"The Charges against the DGO- Dr Tejaswi Naviloor, Assistant Professor, Department of Journalism and Mass Communication, KSOU, Mysore is not proved and submitted enquiry report to the disciplinary authority, KSOU, Mysore for taking necessary action" ಎಂದಿರುತ್ತದೆ.

ವಿಶ್ವವಿದ್ಯಾನಿಲಯವು ಮಾಡಲಾದ ಆರೋಪವು ಸಾಬೀತಾಗಿರುವುದಿಲ್ಲ ಎಂದು ವಿಚಾರಣಾಧಿಕಾರಿಗಳು ತಮ್ಮ ವರದಿಯಲ್ಲಿ ಉಲ್ಲೇಖಿಸಿರುವ ಅಂಶವನ್ನು ಶಿಸ್ತು ಪ್ರಾಧಿಕಾರವಾದ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯವನ್ನು ಚರ್ಚೆ ಹಾಗೂ ನಿರ್ಣಯಕ್ಕೆ ಮಂಡಿಸಿದೆ.

*******

ಕುಲಪತಿಗಳು ಕುಲಸಚಿವರು

ತೀರ್ಮಾನ :

ಶ್ರೀ ಗೋಪಾಲ್ ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರು ಡಾ.ತೇಜಸ್ವಿ ನವಿಲೂರು, ಸಹಾಯಕ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ ಇವರ ಮೇಲೆ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿವಿ ಉದ್ಯೋಗಿಗಳ ಸಿ.ಸಿ.ಎ ಪರಿನಿಯಮದ ನಿಯಮ 9 ಮತ್ತು 10 ರಲ್ಲಿನ ಅನುಬಂಧ 01 ರಿಂದ 04 ರವರೆಗೆ ಆರೋಪ ಪಟ್ಟಿಯೊಂದಿಗೆ ಮಾಡಲಾದ ಆರೋಪಗಳು ಸಾಬೀತಾಗಿರುವುದಿಲ್ಲ ಎಂದು ವರದಿ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಡಾ.ತೇಜಸ್ವಿ ನವಿಲೂರು, ಸಹ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ ಇವರ ದೋಷಾರೋಪ ಮುಕ್ತಗೊಳಿಸಿ ಇವರಿಗೆ ಲಭ್ಯವಾಗುವ ಆರ್ಥಿಕ ಸೌಲಭ್ಯ ಹಾಗೂ ಸೇವಾ ಸೌಲಭ್ಯಗಳನ್ನು ನಿಯಮಾನುಸಾರ ಬಿಡುಗಡೆಗೊಳಿಸಲು ಸಭೆಯು ತೀರ್ಮಾನಿಸಿತು.

*******

2. **ವಿಷಯ:** ವಿಶ್ವವಿದ್ಯಾನಿಲಯದ ವಿವಿಧ ವರ್ಗದ ನೌಕರರು ಅನ್ಯ ಸೇವೆ ನಿಮಿತ್ತ (ಒ.ಒ.ಡಿ) ಸರ್ಕಾರದ ವಿವಿಧ ಇಲಾಖೆಗಳಿಗೆ ನಿಯೋಜಿಸಿರುವ ಮಾಹಿತಿ ಕುರಿತು.

*******

ವಿಶ್ವವಿದ್ಯಾನಿಲಯದ ವಿವಿಧ ವರ್ಗದ ನೌಕರನ್ನು ಅನ್ಯ ಸೇವೆ ನಿಮಿತ್ತ (ಒ.ಒ.ಡಿ) ಸರ್ಕಾರ ವಿವಿಧ ಇಲಾಖೆಗಳಿಗೆ ನಿಯೋಜನೆ ಮಾಡಲು ಪತ್ರ ಕಳುಹಿಸಿರುವ ಸಂಬಂಧ ಈ ಕೆಳಕಂಡ ನೌಕರರನ್ನು ಅನ್ಯ ಸೇವೆ ನಿಮಿತ್ತ (ಒ.ಒ.ಡಿ) ಮೇಲೆ ನಿಯೋಜಿಸಲಾಗಿರುತ್ತದೆ.

| ಕ್ರಸಂ | ನೌಕರರ ಹೆಸರು ಮತ್ತು ಪದನಾಮ | ಕರ್ತವ್ಯ ನಿರ್ಹಿಸುತ್ತಿದ್ದ ವಿಭಾಗ | ನಿಯೋಜನೆಗೊಂಡಿರುವ ಇಲಾಖೆ |
|---|---|---|---|
| 1 | ಶ್ರೀ ಎಸ್.ನಾಗೇಶ್, ಪ್ರದಗು | ಪ್ರವೇಶಾತಿ ವಿಭಾಗ | ಮಾನ್ಯ ಮುಖ್ಯಮಂತ್ರಿಗಳ ಸಚಿವಾಲಯ |
| 2 | ಶ್ರೀ ಮಹದೇವಸ್ವಾಮಿ ಎಂ., ಡಿ.ಇ.ಓ | ಪರೀಕ್ಷಾ ವಿಭಾಗ | ಮಾನ್ಯ ಕೃಷ್ಣ ಬೈರೇಗೌಡ ಕಂದಾಯ ಸಚಿವರ ಸಚಿವಾಲಯ |
| 3 | ಶ್ರೀ ರವಿಶಂಕರ್.ಎಂ, ದ್ವಿದಗು(ಗ್ರೇ.ಪೇ) | ಡೀನ್ (ಅಧ್ಯಯನ ಕೇಂದ್ರಗಳು) | ಮಾನ್ಯ ಮುಖ್ಯಮಂತ್ರಿಗಳ ಸಚಿವಾಲಯ |
| 4 | ಡಾ.ಪಿ.ಹರೀಶ್,<br>ಪ್ರಾದೇಶಿಕ ನಿರ್ದೇಶಕರು(ಕಾ.ವೇ.ಶ್ರೇ) | ಚಿಕ್ಕಮಗಳೂರು ಪ್ರಾದೇಶಿಕ ಕೇಂದ್ರ | ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತಶಾಖೆ |
| ಕ್ರಸಂ | ನೌಕರರ ಹೆಸರು ಮತ್ತು ಪದನಾಮ | ಕರ್ತವ್ಯ ನಿರ್ಹಿಸುತ್ತಿರುವ ವಿಭಾಗ | ನಿಯೋಜನೆಗೆ ಕೋರಿರುವ ಇಲಾಖೆ |
| 1 | ಶ್ರೀ ಮಹೇಶ್ ಕುಮಾರ್ ಕೆ.ಪಿ.,<br>ಪ್ರದಗು | ಪರೀಕ್ಷಾ ವಿಭಾಗ | ಮಾನ್ಯ ಬಿ.ನಾಗೇಂದ್ರ, ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಆಪ್ತ ಶಾಖೆ |

ಈ ಮೇಲಿನ ವಿಷಯವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಯ ಅವಗಾಹನೆಗೆ ಮಂಡಿಸಿದೆ.

*******

ತೀರ್ಮಾನ :

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯದ ವಿವಿಧ ವರ್ಗದ ನೌಕರರುಗಳನ್ನು ಅನ್ಯ ಸೇವೆ ನಿಮಿತ್ತ (ಒ.ಒ.ಡಿ) ಸರ್ಕಾರ ವಿವಿಧ ಇಲಾಖೆಗಳಿಗೆ ನಿಯೋಜಿಸಿರುವುದನ್ನು ಸಭೆಯು ಅವಗಾಹಿಸಿತು.**

*******

ಅಂತಿಮವಾಗಿ, ವ್ಯವಸ್ಥಾಪನಾ ಮಂಡಳಿಯ 173ನೇ ಸಾಮಾನ್ಯ ಸಭೆಗೆ ಆಗಮಿಸಿ ಮಂಡಿಸಲಾದ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಮಾನ್ಯ ಕುಲಪತಿಗಳು ಎಲ್ಲಾ ಸದಸ್ಯರುಗಳಿಗೂ ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

**ಕುಲಪತಿಗಳು** **ಕುಲಸಚಿವರು.**

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
## ಮುಕ್ತಗಂಗೋತ್ರಿ, ಮೈಸೂರು-570006

**ದಿನಾಂಕ: 27.07.2023ರಂದು ಪೂರ್ವಾಹ್ನ 11.00** ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ. ಶರಣಪ್ಪ ವಿ. ಹಲಸೆ ರವರ ಅಧ್ಯಕ್ಷತೆಯಲ್ಲಿ ನಡೆದ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಯ **173**ನೇ ಸಾಮಾನ್ಯ ಸಭೆಯ ನಡಾವಳಿ.

| ಉಪಸ್ಥಿತರು | |
|---|---|
| **ಪ್ರೊ. ಶರಣಪ್ಪ ವಿ. ಹಲಸೆ**<br>ಮಾನ್ಯ ಕುಲಪತಿಗಳು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು<br>ಕರಾಮುವಿ, ಮೈಸೂರು | **ಪ್ರೊ ಕೆ.ಎಲ್.ಎನ್. ಮೂರ್ತಿ**<br>ಕುಲಸಚಿವರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿಗಳು<br>ಕರಾಮುವಿ, ಮೈಸೂರು |
| **ಪ್ರೊ ಲಕ್ಷ್ಮಿ ಎನ್**<br>ಡೀನ್ (ಶೈಕ್ಷಣಿಕ) ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು,<br>ಕರಾಮುವಿ ಮೈಸೂರು | **ಶ್ರೀಮತಿ. ಉಮಾ.ಕೆ**<br>ಉಪಕಾರ್ಯದರ್ಶಿ<br>ಹಣಕಾಸು ಇಲಾಖೆ (ವೆಚ್ಚಗಳು) ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಬೆಂಗಳೂರು – 560 001<br>**ಆನ್ ಲೈನ್ ಮೂಲಕ ಹಾಜರಿರುತ್ತಾರೆ.** |
| **ಶ್ರೀ ಅಡಗೂರು ಹೆಚ್. ವಿಶ್ವನಾಥ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 1179, 3ನೇ ಮೇನ್, 3ನೇ ಕ್ರಾಸ್<br>ಅರವಿಂದ ನಗರ, ಮೈಸೂರು ಜಿಲ್ಲೆ | **ಶ್ರೀಮತಿ. ಶೀತಲ್**<br>ಉಪಕಾರ್ಯದರ್ಶಿ<br>ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ), ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು<br>ಬೆಂಗಳೂರು – 560 001<br>**ಆನ್ ಲೈನ್ ಮೂಲಕ ಹಾಜರಿರುತ್ತಾರೆ.** |
| **ಶ್ರೀ ಬಿ.ಜಿ. ಪಾಟೀಲ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. ಇ/8/862, ಐರಾವಾಳಿ, ನೆಹರು ಗೂಂಜ್<br>ಕಲಬುರಗಿ-585104 | ............... |

*******

O/C 04/08/23

ಕುಲಪತಿಗಳು

ಕುಲಸಚಿವರು